

# ಖುಷಿಯೋ ಖುಷಿ

ಹಂತ - 2

ಅಭ್ಯಾಸ ಪುಸ್ತಕ



## ನನ್ನ ಚಿತ್ರ ಸಂಗ್ರಹ

ನಾನು

ನನ್ನ ಗೆಳತಿ

ನನ್ನ ತಂಗಿ/ಅಕ್ಕ

..............................

ನನ್ನ ತಾಯಿ

ನನ್ನ ಸ್ನೇಹಿತ

"ಖುಷಿಯೋ ಖುಷಿ" ಹಂತ - 2

# ಅನೌಪಚಾರಿಕ ಶಿಕ್ಷಣ ಕೇಂದ್ರಗಳ ಅಭ್ಯಾಸ ಪುಸ್ತಕ

**ಅನುವಾದಕರು: ಪ್ರೊ. ಡಿ.ಆರ್. ಬಳೂರಗಿ,** ಪ್ರಾಧ್ಯಾಪಕರು, ಎಲ್.ವಿ.ಡಿ. ಕಾಲೇಜು, ರಾಯಚೂರು

**ಪರಿಶೀಲನಾ ಕಾರ್ಯಾಗಾರದಲ್ಲಿ ಭಾಗವಹಿಸಿದವರು**

**ಮಂಡ್ಯ ಜಿಲ್ಲೆ**

ಶ್ರೀಕಂಠೇಶ
ಸುಂದರ ಕುಮಾರ್
ಸಿ.ಆರ್.ಸಂಪತ್ತು
ಎ.ಎಸ್. ವಾಣಿ

**ರಾಯಚೂರು ಜಿಲ್ಲೆ**

ಸಂಗಪ್ಪ ಮೂಲಿಮನಿ
ಎ.ವಿ. ಉಪಾಧ್ಯಾಯ
ಎಫ್.ಸಿ. ಚೇಗರೆಡ್ಡಿ
ಲಕ್ಷ್ಮೀದೇವಿ ಶಾಸ್ತ್ರಿ
ಕೆ. ಲಕ್ಷ್ಮಿ
ಸರಸ್ವತಿ ಆರ್. ಕಳಸದ್
ಎಚ್.ವಿಜಯಲಕ್ಷ್ಮಿ

**ಬೆಳಗಾಂ**

ಗೀತ ಎಂ. ಕೋಹಳ್ಳಿ
ಗಜಾನನ ಬಿ. ಮನ್ನಿಕೇರಿ
ದಶರಥ ಮ. ದಾನೋಜಿ

**ಕೋಲಾರ**

ಟಿ.ಎಂ. ರಾಮಕೃಷ್ಣೇಗೌಡ
ಸಿ. ವಿಜಯಕುಮಾರಿ
ಎಸ್.ಸಿ. ರಾಜರಾಜೇಶ್ವರಿ
ಜಿ.ಕೆ. ಚಂದ್ರಕಲಾ
ಎಂ. ಬೆಳ್ಳಾರಪ್ಪ

**ಬೆಂಗಳೂರು ಗ್ರಾಮಾಂತರ**

ಆರ್.ಎನ್. ವಸಂತ

**ಸಹಕಾರ**

ಜೆ. ಶಿವಾನಂದಮೂರ್ತಿ
ಸೌಂದರರಾಜನ್
ಚೌಡಬೈಲಪ್ಪ

**ಕಲಾವಿದರು**

ಬಾಗೂರು ಮಾರ್ಕಾಂಡೇಯ

**ಡಿಟಿಪಿ**

ಆರ್. ರಾಜಶೇಖರ್

**ಕರಡನ್ನು ತಿದ್ದಿದವರು**

ಎಸ್.ಎನ್.ಗೋವಿಂದ ಗೌಡ
ಜಿ.ವಿನುತ

**ಸಮನ್ವಯಾಧಿಕಾರಿ**


**ಈ. ನಂಜಪ್ಪ,**
ಕಾರ್ಯಕ್ರಮ ಅಧಿಕಾರಿ(ಶಿಕ್ಷಣ ಶಾಸ್ತ್ರ ಮತ್ತು ತರಬೇತಿ)

PUBLICATION PROGRAMME
TITLE EDITORIAL
REFERENCE COPY
प्रकाशन कार्यक्रम–सन्दर्भ प्रति

**ಪಿ. ಸುಬ್ಬರಾವ್**
ನಿರ್ದೇಶಕರು (ಕಾರ್ಯಕ್ರಮ)

**ಅನಿತಾ ಕೌಲ್**
ರಾಜ್ಯ ಯೋಜನಾ ನಿರ್ದೇಶಕರು

# ಒಂಟೆ



ಓಡುತ ನಡೆಯುತ
ಮಾಡುತ ಮೋಡಿ
ಎಂತಹ ದೈತ್ಯ
ದೇಹ ನೋಡಿ ॥

ಕುತ್ತಿಗೆ ಕೋಲು
ಕಂಬದ ಕಾಲು
ಭಾರವ ಹೊರಲು
ಒಂಟೆಯೇ ಮೇಲು ॥

ಹೊರಟರೆ ದೂರ
ಹೊರುತಲಿ ಬಾರ
ಕೇಳದು ನೀರ
ನೋಟವು ನೇರ ॥

ಸೋಲದ ಕಾಲು
ಮೇಲುರಿ ಬಿಸಿಲು
ದುಡಿತಕೆ ಎಂದೂ ಬಗ್ಗದ ಬಂಟ
ಮನುಜಗೆ ನಿಜಕೂ ಒಂಟೆಯೇ ನಂಟ


1. ಕೆಳಗಿನ ಪಟ್ಟಿಯಲ್ಲಿ ಒಂಟೆಗಿಂತ ಎತ್ತರವಾದವುಗಳ ಸುತ್ತಲೂ ◯ ಗುರುತು ಮಾಡಿರಿ
   ನಾಯಿ, ಬೆಕ್ಕು, ಬೆಟ್ಟ, ಎಮ್ಮೆ, ತಾಳೆಮರ, ಆನೆ, ಇಲಿ, ತೆಂಗಿನ ಮರ, ಬಾತುಕೋಳಿ, ಅಡಿಕೆ ಮರ, ಕಂಬ
2. ಒಂಟೆಯ ಕೆಳಗೆ ಯಾವ ಯಾವುವು ಹಾಯ್ದು ಹೋಗಬಲ್ಲವು?
3. ಒಂಟೆಯ ಮೇಲೆ ಯಾವ ಯಾವುವು ಹಾಯ್ದು ಹೋಗಬಲ್ಲವು?




2

# ಬೇರೆ ಮಾದರಿ


ಕಾಗೆ, ಗುಬ್ಬಚ್ಚಿ, ನವಿಲು, ಗಿಣಿ
ಇದರಲಿ ಯಾವುದು ನಾಟ್ಯ ರಾಣಿ?






ಮಂಗ, ಕೋಳಿ, ಬೆಕ್ಕು, ಮೀನು
ಇದರಲಿ ನೀರಿನಲ್ಲಿದ್ದು ವಾಸಿಸುವುದೇನು?

ಹಸು, ಎಮ್ಮೆ, ನಾಯಿ, ಕುರಿ
ಇದರಲಿ ಹುಲ್ಲನ್ನು ತಿನ್ನುವುದು ಯಾವುದು?





ಹೂವು, ಹಣ್ಣು, ಹಾವು, ಎಲೆ,
ಇದರಲಿ ಸರಸರ ನಡೆವುದು ಯಾವುದು?

ಹುಣಸೆ, ಬಾಳೆ, ಸಪೋಟ, ಮಾವು
ಇದರಲಿ ಯಾವುದು ಹುಳಿ ಹುಳಿ?

- ಪ್ರತಿಯೊಂದು ಗುಂಪು ಚಿತ್ರದ ಪಕ್ಕದಲ್ಲಿ ಒಂದು ಖಾಲಿ ವೃತ್ತವಿದೆ. ಗುಂಪಿನಿಂದ ಭಿನ್ನವಾದ ವಸ್ತುವಿನ ಚಿತ್ರವನ್ನು ಅದರಲ್ಲಿ ಬರೆಯಿರಿ.
- ಪ್ರತಿಯೊಂದು ಚಿತ್ರದ ಬಳಿ ಅದರ ಹೆಸರು ಬರೆಯಿರಿ.
- ಚಿತ್ರ ಕಾರ್ಡುಗಳು ಅಥವಾ ಹೊರಗಿನಿಂದ ಬೇರೆ ವಸ್ತುಗಳನ್ನು ತನ್ನಿ. ಆ ವಸ್ತುವಿನ ಮೇಲೆ ಇದೆ ಬಗೆಯ ಇನ್ನಷ್ಟು ಒಗಟುಗಳನ್ನು ರಚಿಸಿರಿ.




**ಬೇರೆ ಮಾಡಿರಿ ಮತ್ತು ಹೆಸರು ಬರೆಯಿರಿ.**

| ನಾಲ್ಕು ಕಾಲಿನ ಜೀವಿಗಳು | ನೀರಿನಲ್ಲಿ ವಾಸಿಸುವ ಜೀವಿಗಳು | ಹಾರುವಂಥಹ ಜೀವಿಗಳು |
|---|---|---|
| | | |






# ಪತಂಗ ಮತ್ತು ಮನೆ




- ಮೇಲಿನ ಚಿತ್ರಗಳಲ್ಲಿ ಮನೆಗಳನ್ನು ಎಣಿಕೆ ಮಾಡಿರಿ. ಅತಿ ಹೆಚ್ಚು ಮನೆಗಳಿರುವ ಚಿತ್ರಕ್ಕೆ ಹಳದಿ ಬಣ್ಣ ಹಾಕಿರಿ.
- ಅತಿ ಕಡಿಮೆ ಮನೆಗಳಿರುವ ಚಿತ್ರಕ್ಕೆ ಹಸಿರು ಬಣ್ಣ ಹಾಕಿರಿ.
- ಎಂಟು ಮನೆಗಳಿರುವ ಚಿತ್ರಗಳೆಷ್ಟು?
- ನಾಲ್ಕು ಮನೆಗಳಿರುವ ............... ಚಿತ್ರಗಳಿವೆ.
- ಎಲ್ಲಕ್ಕಿಂತ ದೊಡ್ಡ ಆಕೃತಿ ಯಾವುದು? ಸ್ಲೇಟಿನ ಮೇಲೆ ಇಂತಹ ಮತ್ತಷ್ಟು ಆಕೃತಿಗಳನ್ನು ರಚಿಸಿರಿ.

# ತೋಟ - ಕೀಟ



ನಾನು ಕಂಡೆ ವಸ್ತು ಮೂರು
ಅಣ್ಣ ಕಂಡ ವಸ್ತು ಮೂರು
ನಮ್ಮ ಮನೆ ಮುಂದೆ ತೋಟ
ತೋಟದಲ್ಲೊಂದು ಕೀಟ
ಮರದ ಕೊಂಬೆ ಮೇಲೆ ಎಲೆ
ಅದರ ಮೇಲೆ ಜೇಡನ ಬಲೆ
ಬಲೆಯ ಮೇಲೆ ಜೇಡ
ಜೇಡನನ್ನು ಮುಟ್ಟಬೇಡ



ನಾನು ಕಂಡೆ ವಸ್ತು ಮೂರು
ಅಣ್ಣ ಕಂಡ ವಸ್ತು ಮೂರು
ಊರ ಮುಂದೆ ಹೊಲ
ಹೊಲದಲ್ಲೊಂದು ಬಿಲ
ಬಿಲದ ಪಕ್ಕದಲ್ಲಿ ಕರಡಿ
ಅದರ ಎತ್ತರ ಮೂರಡಿ
ಕರಡಿ ಕೈಯಲ್ಲಿರುವುದು ಏನು?
ಸಿಹಿ ಸಿಹಿ ಬೆಟ್ಟದ ಜೇನು
ಕರಡಿ ಕಿವಿ ಜೋಡಿ
ಕರಡಿ ಬರ್ತಿದೆ ಬಿಡು ಗಾಡಿ

ಖಾಲಿ ಜಾಗದಲ್ಲಿ ಇದೇ ರೀತಿ ಚಿತ್ರಗಳನ್ನು ಬರೆಯಿರಿ?

| | |
|---|---|
| ತೋಟ | ಕೀಟ |
| ಎಲೆ | ಬಲೆ |
| ಜೇಡ | ಬೇಡ |

- ಎಲೆ ಎಲ್ಲಿದೆ?
- .................. ನ್ನು ಮುಟ್ಟಬೇಡ
- ಕರಡಿ ಕೈಯಲ್ಲಿರುವುದು ಏನು?
- ಕರಡಿ ಬರ್ತಿದೆ.....................

| | |
|---|---|
| ಹೊಲ | ಬಿಲ |
| ಜೇನು | ಏನು |
| ಜೋಡಿ | ಗಾಡಿ |


# ಚಿತ್ರ ಪೂರ್ಣಗೊಳಿಸಿ ಹೆಸರು ಬರೆಯಿರಿ

ಆರು ಕಿಟಕಿಗಳು

ಐದು ಮಾವಿನ ಹಣ್ಣುಗಳು

ಎರಡು ಬಾಗಿಲುಗಳು

ನಾಲ್ಕು ಮೀನುಗಳು



ಹೊರಗಿನಿಂದ ಚಿಕ್ಕ ಕಲ್ಲುಗಳನ್ನು ತಂದು ನೀವು ಚಿತ್ರಿಸಿದ ವಸ್ತುಗಳ ಮೇಲೆ ಇರಿಸಿರಿ.
ಬಸ್ಸು, ಕಿಟಕಿ, ಮಾವಿನ ಹಣ್ಣು, ಮರ, ಮನೆ, ಮೀನು, ಸೀಸೆ, ಬಾಗಿಲು

| ಒಂದು(ಏಕ) | ಅನೇಕ |
|---|---|
| ಕಿಟಕಿ | ಕಿಟಕಿಗಳು |
| ಬಾಗಿಲು | |
| ಮೀನು | |
| ಮಾವಿನಹಣ್ಣು | |
| ಹುಡುಗ | |
| ಹುಡುಗಿ | |

**ಮಾದರಿಯಂತೆ ಬರೆಯಿರಿ**

ಉದಾಹರಣೆ:

ಶಾಲೆ – ಶಾಲೆಗಳು

ಕಲ್ಲು –

ಪುಸ್ತಕ –

ಮನುಷ್ಯರು – ಮನುಷ್ಯ


ರಾಜರು –

ಹೆಂಗಸರು –


ಭಟ್ಟರು –

# ಚಿತ್ರ ಪೂರ್ಣಗೊಳಿಸಿ ಹೆಸರು ಬರೆಯಿರಿ


ಆರು ಕಿಟಕಿಗಳು




ಐದು ಮಾವಿನ ಹಣ್ಣುಗಳು



ಎರಡು ಬಾಗಿಲುಗಳು



ನಾಲ್ಕು ಮೀನುಗಳು



ಹೊರಗಿನಿಂದ ಚಿಕ್ಕ ಕಲ್ಲುಗಳನ್ನು ತಂದು ನೀವು ಚಿತ್ರಿಸಿದ ವಸ್ತುಗಳ ಮೇಲೆ ಇರಿಸಿರಿ. ಬಸ್ಸು, ಕಿಟಕಿ, ಮಾವಿನ ಹಣ್ಣು, ಮರ, ಮನೆ, ಮೀನು, ಸೀಸೆ, ಬಾಗಿಲು

| **ಒಂದು(ಏಕ)** | **ಅನೇಕ** |
|---|---|
| ಕಿಟಕಿ | ಕಿಟಕಿಗಳು |
| ಬಾಗಿಲು | |
| ಮೀನು | |
| ಮಾವಿನಹಣ್ಣು | |
| ಹುಡುಗ | |
| ಹುಡುಗಿ | |

**ಮಾದರಿಯಂತೆ ಬರೆಯಿರಿ**

ಉದಾಹರಣೆ:

| | |
|---|---|
| ಶಾಲೆ – ಶಾಲೆಗಳು | ಮನುಷ್ಯರು – ಮನುಷ್ಯ |
| ಕಲ್ಲು – | ರಾಜರು – |
| ಪುಸ್ತಕ – | ಹೆಂಗಸರು – |
| | ಭಟ್ಟರು – |


# ಹಲ್ಲಿ ಮತ್ತು ಇಲಿ

ಯಾವ ಖಾನೆಯಲ್ಲಿ ಹೆಚ್ಚು ಶೀಷೆಗಳಿವೆ? ಯಾವ ಶೀಷೆಯಲ್ಲಿ ಎಲ್ಲಕ್ಕಿಂತ ಹೆಚ್ಚು ವಸ್ತುಗಳಿವೆ? ಪಟ್ಟಿಯಲ್ಲಿ ದೊಡ್ಡ ಚಮಚಗಳು ಹೆಚ್ಚಾಗಿವೆಯೆ? ಅಥವಾ ಚಿಕ್ಕ ಚಮಚಗಳು ಹೆಚ್ಚಾಗಿವೆಯೇ? ಎಣಿಕೆ ಮಾಡಿ ಹೇಳು.



- ಗೋಡೆಯ ಮೇಲೆ ಯಾವ ಯಾವ ವಸ್ತುಗಳನ್ನು ತೂಗು ಬಿಡಲಾಗಿದೆ?
- ಉದ್ದಪಟ್ಟಿಯಲ್ಲಿ ಹೆಚ್ಚು ವಸ್ತುಗಳಿವೆಯೆ? ಅಥವಾ ಚಿಕ್ಕ ಪಟ್ಟಿಯಲ್ಲಿ ಹೆಚ್ಚು ವಸ್ತುಗಳಿವೆಯೇ?
- ಉದ್ದ ಪಟ್ಟಿಯಲ್ಲಿರುವ ವಸ್ತುಗಳ ಹೆಸರನ್ನು ಬರೆಯಿರಿ.
- ಎಣಿಕೆಯನ್ನು ಮಾಡುವಾಗ ದೊಡ್ಡ ವಸ್ತುವಿನಿಂದ ಆರಂಭಿಸಿ ಎಲ್ಲಕ್ಕಿಂತ ಚಿಕ್ಕ ವಸ್ತುವಿನವರೆಗೆ ಎಲ್ಲಾ ವಸ್ತುಗಳ ಹೆಸರುಗಳನ್ನು ಸ್ಲೇಟಿನ ಮೇಲೆ ಬರೆಯಿರಿ.

# ಮಿಡತೆ ಮತ್ತು ಮಂಗ



ಒಂದು ಕಾಡಿನಲ್ಲಿ ಒಂದು ಮಂಗ ಮತ್ತು ಮಿಡತೆ ಮಾವಿನ ಮರದಲ್ಲಿ ವಾಸಿಸುತ್ತಿದ್ದವು. ಈ ಮೂವರು ಸ್ನೇಹಿತರಾಗಿದ್ದರು. ಆಷಾಡದ ಒಂದು ದಿನ ಗಾಳಿ ಜೋರಾಗಿ ಬೀಸುತ್ತಿತ್ತು. ಆಗ ಅಲ್ಲಿಯೇ ಹಾರುತ್ತಿದ್ದ ಮಿಡತೆ ಗಾಳಿಯಲ್ಲಿ ತೂರಿ ಬಹಳ ದೂರ ಹೋಯಿತು. ಮಿಡತೆಯನ್ನು ಕಾಣದೆ ಮಂಗ ಮತ್ತು ಮಾವಿನ ಮರ ಬಹಳ ಮರುಗಿದವು. ನಂತರ ಮಾವಿನ ಮರ ಮಂಗನಿಗೆ "ಇಲ್ಲಿಂದ ಸ್ವಲ್ಪ ದೂರದಲ್ಲಿ ಮಲ್ಲಿಗೆ ಗಿಡವಿದೆ. ಅದನ್ನು ಕೇಳಿದರೆ ಅದು ಮಿಡತೆಯ ಬಗ್ಗೆ ಹೇಳುತ್ತದೆ" ಎಂದು ಹೇಳಿತು.

ಮಾವಿನ ಮರ ಹೇಳಿದಂತೆ ಮಂಗವು ಮಲ್ಲಿಗೆ ಗಿಡದ ಬಳಿ ಬಂದು ಕೇಳಿತು. ಮಲ್ಲಿಗೆ ಗಿಡವು ಮಂಗನಿಗೆ "ಇಲ್ಲಿಂದ ಸ್ವಲ್ಪ ದೂರ ಹೋಗು ಅಲ್ಲಿ ಒಂದು ಬಂಡೆ ಇದೆ, ಅದರ ಪಕ್ಕ ಒಂದು ಮುತ್ತುಗದ ಮರವಿದೆ, ಅದನ್ನು ಕೇಳಿದರೆ ಮಿಡತೆ ಎಲ್ಲಿದೆ, ಎಂದು ಹೇಳುತ್ತದೆ" ಎಂದಿತು. ಮಂಗವು ಮುಂದೆ ಹೋಗಿ ಮುತ್ತಗದ ಮರವನ್ನು ಮಿಡತೆಯ ಬಗ್ಗೆ ಕೇಳಿತು. ಮುತ್ತುಗದ ಮರವು, "ಇಲ್ಲಿಂದ ನಾಲ್ಕನೇ ತಿರುವಿಗೆ ಹೋಗಿ ತಿರುಗಿದರೆ ಅಲ್ಲೊಂದು ಮಂಟಪವಿದೆ, ಅಲ್ಲಿ ಹೋಗಿ ನೋಡಿದರೆ ಮಿಡತೆ ಸಿಗುತ್ತದೆ" ಎಂದು ಹೇಳಿತು. ಮಂಗಕ್ಕೆ ಬಹಳ ಸಂತಸವಾಯಿತು. ಇನ್ನು ನನ್ನ ಗೆಳೆಯ ಮಿಡತೆ ಸಿಕ್ಕಿದನೆಂದು ಹಿಗ್ಗುತ್ತಾ ಹೋಯಿತು.

ಮಂಟಪದ ಬಳಿ ಮಂಗನಿಗೆ ಒಂದು ಮೆಣಸಿನಕಾಯಿ ಗಿಡ ಕಾಣಿಸಿತು. ಮಂಗವು ಆ ಮೆಣಸಿನಕಾಯಿ ಗಿಡವನ್ನು ಕೇಳಿತು. ಆಗ ಅದು "ದೂರದಲ್ಲಿರುವ ಪೊದೆಯನ್ನು ನೋಡು ಅಲ್ಲಿ ಒಂದು ಪರದೆ ಕಾಣಿಸುತ್ತದೆ, ಆ ಪರದೆಯನ್ನು ಸರಿಸಿದರೆ ಮಿಡತೆಯು ಸಿಗುತ್ತದೆ" ಎಂದು ಹೇಳಿತು. ಮಂಗವು ಬಹಳ ಆನಂದದಿಂದ ಆ ಪೊದೆಯ ಬಳಿ ಹೋಗಿ ಪರದೆಯನ್ನು ಸರಿಸಿತು. ಅಲ್ಲಿ ಮಿಡತೆಯನ್ನು ಕಂಡು ಅದಕ್ಕೆ ಬಹಳ ಆನಂದವಾಯಿತು. ಮಂಗ ಮತ್ತು ಮಿಡತೆ ಕೂಡಿ ಸಂತಸದಿಂದ ನಲಿಯುತ್ತಾ ಬಂದು ಮಾವಿನ ಮರವನ್ನು ಸೇರಿದವು.

# ನಾನು ಯಾರು?

ನನ್ನ ಹೆಸರು ತಿಳಿಸಿರಿ

ನನ್ನ ಚಿತ್ರ ಬರೆಯಿರಿ.

ನನಗೆ ಚಕ್ರವೆರಡು ಗಂಟೆ ಒಂದು
ತುಳಿಯುವಾಗ ದಾರಿಯಲ್ಲಿ ಟಿನ್ ಟಿನ್
ಶಬ್ದ ಮಾಡುವೆ

ನನ್ನ ಕೊಕ್ಕು ಕೆಂಪು ನನ್ನ ರೆಕ್ಕೆ ಹಸಿರು

ನನ್ನ ಬಣ್ಣ ಕೆಂಪು
ಆಕಾರ ಗುಂಡಗೆ
ನನ್ನ ರುಚಿ ಸಿಹಿ

ನೀರಿನಲ್ಲಿ ನನ್ನ ವಾಸ
ನನ್ನ ಬೆನ್ನು ಬಹಳ ಗಟ್ಟಿ
ನಡಿಗೆ ಮಾತ್ರ ನಿಧಾನ

ನನಗೆ ಕಾಲುಗಳುಂಟು ನನ್ನನ್ನು ಮರದಿಂದ
ಮಾಡಿರುತ್ತಾರೆ
ನನ್ನ ಮೇಲೆ ನೀವು ಕುಳಿತುಕೊಳ್ಳುವಿರಿ

ನನ್ನನ್ನು ಅಂಗಡಿಯಿಂದ ತರುವರು
ಕೊಯ್ಯುವಾಗ ಮುಂದೆ
ಕುಳಿತು ಅಳುವರು
ಅಡುಗೆಗೆ ಬಳಸುವರು

ಬೆಳ್ಳನೆಯ ಹುಡುಗನಿಗೆ ಒಂದು ಕಪ್ಪು ಟೋಪಿ ಇದೆ

# ಆಟ

ಹೊರಗಿನಿಂದ ಸಣ್ಣ ಕಲ್ಲುಗಳನ್ನು ಮತ್ತು ಬಳೆಯ ಚೂರುಗಳನ್ನು ಆಯ್ದುಕೊಂಡು ಬನ್ನಿ. ಅವೆರಡನ್ನೂ ಪ್ರತ್ಯೇಕವಾಗಿ ರಾಶಿ ಹಾಕಿ. 5 ಸಣ್ಣ ಕಲ್ಲುಗಳನ್ನು ತೆಗೆದುಕೊಳ್ಳಿ. ಅದಕ್ಕೆ ಎಷ್ಟು ಬಳೆ ಚೂರುಗಳನ್ನು ಸೇರಿಸಿದರೆ ಒಟ್ಟು 8 ಆಗುತ್ತದೆ?

5 ಕಲ್ಲುಗಳಿಗೆ 3 ಬಳೆ ಚೂರುಗಳನ್ನು ಸೇರಿಸಬೇಕಾಗುವುದು. ಆಗ ಮೊತ್ತ 8 ಆಗುವುದು. ಇದೇ ರೀತಿ ಮತ್ತಷ್ಟು ಜೊತೆಗಳನ್ನು ರೂಪಿಸಲು ಸಾಧ್ಯವೇ?

ಈಗ 2 ಕಲ್ಲುಗಳನ್ನು ತೆಗೆದುಕೊಳ್ಳಿ. ಇದಕ್ಕೆ 6 ಬಳೆ ಚೂರುಗಳನ್ನು ಸೇರಿಸಿ. ಮೊತ್ತ ಎಷ್ಟಾಯಿತು?

ಹೀಗೆ ಎಷ್ಟು ವಿಧದಿಂದ ಮೊತ್ತ 8ನ್ನು ಪಡೆಯಲು ಸಾಧ್ಯ? ಮೂರು ಅಥವಾ ನಾಲ್ಕು ವಿಧಗಳಿಂದಲೇ ಅಥವಾ ಇನ್ನೂ ಹೆಚ್ಚು ವಿಧಗಳಿಂದಲೇ? ಬೇರೆ ಬೇರೆ ಸಂಖ್ಯೆ ಕಲ್ಲು ಮತ್ತು ಬಳೆ ಚೂರುಗಳನ್ನು ತೆಗೆದುಕೊಳ್ಳಿ. ಮೊತ್ತ 8ನ್ನು ಪಡೆಯಿರಿ ಮತ್ತು ಸ್ಲೇಟಿನ ಮೇಲೆ ಬರೆ.

9, 6, 12, 15 ಮೊತ್ತ ನೀಡುವ ಜೊತೆಗಳನ್ನು ರೂಪಿಸು ಮತ್ತು ಅಂಕಿಗಳನ್ನು ಬರೆ.


ಉದಾ:

4 + 5 = 9

3 + --- = 9

ಇನ್ನು ಯಾವ ವಸ್ತುಗಳಿಂದ ಇಂತಹ ಆಟವಾಡಲು ಸಾಧ್ಯ?

# ಎಣಿಕೆ ಮಾಡಿ




ಹಿಂದಿನ ಪುಟದಲ್ಲಿ ತೋರಿಸಲಾದ ಚಿತ್ರದಂತೆ ಮತ್ತಷ್ಟು ಚಿತ್ರ ರಚಿಸಿರಿ.

ಮನೆ  ಇಂತಹ 4 ಮನೆಗಳು

ಹಕ್ಕಿ  ಇಂತಹ 3 ಹಕ್ಕಿಗಳು

ಕಾರು  ರಸ್ತೆಯ ಮೇಲೆ 6 ಮೋಟಾರುಗಳು

ಮರ  ಇಂತಹ 5 ಮರಗಳು

ಸೈಕಲ್  ಇಂತಹ 4 ಸೈಕಲ್‌ಗಳು

**ಎಣಿಕೆ ಮಾಡಿರಿ**


2 ಬಾಗಿಲುಗಳಿರುವ ಎಷ್ಟು ಮನೆಗಳಿವೆ?

ಮರಗಳೆಷ್ಟಿವೆ? ಮತ್ತು ಹೊಲಗಳೆಷ್ಟಿವೆ?

- ಚಿತ್ರದಲ್ಲಿರುವ ಪ್ರತಿಯೊಂದು ಜೊತೆಯ ಕೆಳಗೆ ಅವುಗಳ ಹೆಸರನ್ನು ಬರೆಯಿರಿ.
- ಚಿತ್ರದಲ್ಲಿರುವ ಇತರ ವಸ್ತುಗಳನ್ನೂ ಸಹ ಎಣಿಕೆ ಮಾಡಿರಿ. ಮತ್ತು ಅದನ್ನು ಸ್ಲೇಟಿನಲ್ಲಿ ಬರೆಯಿರಿ.

# ರಸ್ತೆ ಉದ್ದಕ್ಕೂ ನಡೆದು ಜೊತೆ ಸೇರಿಸಿ

ರಸ್ತೆಯ ಉದ್ದಕ್ಕೂ ನಡೆದು, ಸರಿಯಾದ ಚಿತ್ರಗಳಿಗೆ ಸರಿಯಾದ ಸಂಖ್ಯೆಯನ್ನು ಬರೆಯಿರಿ.




ಇದೇ ರೀತಿ ಸ್ಲೇಟಿನ ಮೇಲೆ ಇನ್ನಷ್ಟು ಉದಾಹರಣೆಗಳನ್ನು ಬರೆಯಿರಿ. ಸ್ನೇಹಿತರ ಸಂಗಡ ಈ ಆಟವನ್ನಾಡಿರಿ.

# ದಡ ಸೇರಿದರು

ಒಂದು ರಾತ್ರಿ ದೋಣಿಯಲ್ಲಿ ಮಲ್ಲು ಮತ್ತು ಅವನ ಹೆಂಡತಿ ಕುಳಿತಿದ್ದರು. ಅವರೊಂದಿಗೆ ಅವರ ಮಗುವೂ ಸಹ ದೋಣಿಯಲ್ಲಿತ್ತು.



ಜೋರಾಗಿ ಗಾಳಿ ಬೀಸಿ ದೋಣಿಯು ಬಂಡೆಗೆ ಬಡಿಯಿತು. ದೋಣಿ ಮುಗುಚಿತು. ಮಲ್ಲು ಈಜಿ ದಡ ಸೇರಿದನು.


ಮಲ್ಲುವಿನ ಹೆಂಡತಿ "ಅಯ್ಯೋ, ನನ್ನನ್ನು ಕಾಪಾಡಿ" ಎಂದು ಜೋರಾಗಿ ಚೀರಿದಳು. ಆಗ ಅಲ್ಲಿಯೇ ಇದ್ದ ಕಲ್ಲೇಶಿಯು ಮಲ್ಲುವಿನ ಹೆಂಡತಿ ಮತ್ತು ಮಗುವನ್ನು ಕಾಪಾಡಿ ದಡ ಸೇರಿಸಿದನು.




1. ಮಲ್ಲು ಈಜಿ ದಡ ಸೇರಿದನು
2. ಮಲ್ಲುವಿನ ಹೆಂಡತಿ ದಡ ಸೇರಿದಳು
3. ಮಗು ದಡ ಸೇರಿತು.

1. ಮಗು ದಡ .............
2. ಮಲ್ಲು ದಡ .............
3. ದೋಣಿ ದಡ .............
4. ಉಮಾ ದಡ .................

# ಆಡೋಣ ಬನ್ನಿ




ಮೇಲೆ ಕೊಟ್ಟ ಆಕೃತಿಗಳನ್ನು ರಚಿಸಲು ಸಾಧ್ಯವೇ ? ಕಾಗದದ ಮೇಲೆ ಇಂತಹ ಆಕೃತಿಗಳನ್ನು ರಚಿಸಿ ಕತ್ತರಿಸಿ ತೆಗೆಯಿರಿ. ಇವನ್ನು ಜೋಡಿಸಿ ಮತ್ತಷ್ಟು ಆಕೃತಿಗಳನ್ನು ಮಾಡಿರಿ.

ಉದಾ: 

- ಬಿದಿರಿನ ಇಲ್ಲವೆ ಪೊರಕೆ ಕಡ್ಡಿಗಳನ್ನು ಬಳಸಿ ಬಗೆ ಬಗೆಯ ಆಕೃತಿಗಳನ್ನು ರೂಪಿಸಿ.
- ಜೇಡಿಮಣ್ಣಿನಿಂದಲೂ ಇಂತಹ ಆಕೃತಿಗಳನ್ನು ಮಾಡಿಸಿ.
- ಮರಳು ಅಥವಾ ಮಣ್ಣಿನ ಮೇಲೆ ಇಂತಹ ವಿದಧ ಆಕೃತಿಗಳನ್ನು ರೂಪಿಸಿ.
- ನೀವು ಚಿತ್ರಿಸಿದ ವಸ್ತುಗಳ ಹೆಸರನ್ನು ಸ್ಲೇಟಿನ ಮೇಲೆ ಬರೆಯಿರಿ.

# ಹೆಸರು ಬರೆಯಿರಿ

ಪ್ರತಿಯೊಂದು ಚಿತ್ರದ ಹೆಸರು ಆರಿಸಿ ಆಯಾ ಚಿತ್ರದ ಕೆಳಗೆ ಬರೆಯಿರಿ. "ಗ" ದಿಂದ ಆರಂಭವಾಗುವ ಹೆಸರಿನ ಚಿತ್ರಗಳಿಗೆ ಹಳದಿ ಬಣ್ಣ ತುಂಬಿರಿ. "ಮ" ದಿಂದ ಆರಂಭವಾಗುವ ಹೆಸರಿನ ಚಿತ್ರಗಳಿಗೆ ಹಸಿರು ಬಣ್ಣ ತುಂಬಿರಿ.




- ಮ, ಪ, ಗ, ಹ ಅಕ್ಷರಗಳಿಂದ ಆರಂಭವಾಗುವ ವಸ್ತುಗಳ ಹೆಸರುಗಳನ್ನು ಸ್ಲೇಟಿನ ಮೇಲೆ ಬರೆಯಿರಿ.

**ಆರಿಸಿ ಬರೆಯಿರಿ**

**ಯಾವ ವಸ್ತು ಎಲ್ಲಿ**

| ಮನೆಯೊಳಗೆ | ಮನೆಯ ಹೊರಗೆ |
|---|---|
| ........................ | ........................ |
| ........................ | ........................ |
| ........................ | ........................ |
| ........................ | ........................ |

# ಸರಿಯಾದ ಜೊತೆಗಳನ್ನು ಕೂಡಿಸಿರಿ.

| | | |
|---|---|---|
| 1+2 | 4 | 2+2 |
| 8+1 | 7 | 6+3 |
| 2+3 | 6 | 2+1 |
| 3+1 | 8 | 4+1 |
| 5+2 | 9 | 6+1 |
| 2+4 | 5 | 3+3 |
| 7+1 | 3 | 4+4 |

ಇಂತಹ ಮತ್ತಷ್ಟು ಜೊತೆಗಳನ್ನು ಬರೆಯಿರಿ.

4 + 1 = 5

2 + 3 = 5

- ಹೊರಗಿನಿಂದ ಸಣ್ಣ ಕಲ್ಲುಗಳನ್ನು ತೆಗೆದುಕೊಂಡು ಬನ್ನಿರಿ. ಮಧ್ಯದಲ್ಲಿರುವ ವೃತ್ತಗಳಲ್ಲಿ ಬರೆದ ಅಂಕಿಯಷ್ಟೇ ಸಣ್ಣ ಕಲ್ಲುಗಳನ್ನಿಡಿರಿ.
- ಪ್ರತಿಯೊಂದು ಸಣ್ಣ ಕಲ್ಲುಗಳ ರಾಶಿಯನ್ನು ಎಷ್ಟು ರೀತಿಯಲ್ಲಿ ಎರಡು ಭಾಗಗಳಾಗಿ ವಿಂಗಡಿಸಲು ಸಾಧ್ಯ?

# ಹಾವು ಮತ್ತು ಕೋತಿ

● ಚಿತ್ರ ನೋಡಿಕೊಂಡು ಸರಿ ವಾಕ್ಯದ ಮೇಲೆ ಗುರುತು ಹಾಕಿ/ ಸರಿಯಾದ ವಾಕ್ಯಗಳನ್ನು ಪಟ್ಟಿ ಮಾಡಿರಿ.



ಕೋತಿ ಲೋಟವನ್ನು ಎತ್ತಿಕೊಂಡಿತು

ಕೋತಿ ಕುಂಡವನ್ನು ಎತ್ತಿಕೊಂಡಿತು



ಇಲಿಯನ್ನು ಕುಂಡದಿಂದ ಮುಚ್ಚಿತು

ಹಾವನ್ನು ಕುಂಡದಿಂದ ಮುಚ್ಚಿತು



ಕೋತಿ ಕುಂಡದ ಮೇಲೆ ಠೀವಿಯಿಂದ ಕುಳಿತಿತು

ಕೋತಿ ಕುಂಡದ ಮೇಲೆ ನಿಂತುಕೊಂಡಿತು



ಹಾವು ಕೋತಿಗೆ ಕಚ್ಚಿತು

ಕೋತಿ ಹಾವಿಗೆ ಕಚ್ಚಿತು



ಕೋತಿ ನಗುತಲಿದೆ

ಕೋತಿಯ ಬಾಲವು ತುಂಡಾಯಿತು

# ಓದಿರಿ, ರಚಿಸಿರಿ ಮತ್ತು ಎಣಿಸಿರಿ

ಆರು ಹಕ್ಕಿಗಳು
6 

ಹನ್ನೆರಡು ಎಲೆಗಳು
12 

ಹದಿನಾಲ್ಕು ತ್ರಿಭುಜಗಳು
14 

ಏಳು ಚೆಂಡುಗಳು
7 

ಎಂಟು ಹೂಗಳು
8 

ಹದಿನಾರು ಚೌಕಗಳು
16 

ಇಪ್ಪತ್ತು ಮರಗಳು
20 

ಹತ್ತು ಇಲಿಗಳು
10 

ಸ್ಲೇಟಿನ ಮೇಲೆ ಇದೇ ಬಗೆಯ ಇನ್ನಷ್ಟು ವಸ್ತುಗಳನ್ನು ಚಿತ್ರಿಸಿರಿ (ಉದಾ: 8 ಲೋಟಗಳು, ಬಳೆ ಚೂರುಗಳು, ಹೆಂಚಿನ ಚೂರು) ಇಂತಹ ಚಿಕ್ಕ ಚಿಕ್ಕ ವಸ್ತುಗಳನ್ನು ಸಂಗ್ರಹಿಸಿರಿ. ನೀವು ರಚಿಸಿದ ಚಿತ್ರಗಳ ಮೇಲೆ ಅವುಗಳನ್ನಿಟ್ಟು ನೀವು ಸರಿಯಾಗಿ ಎಣಿಕೆ ಮಾಡುತ್ತೀರಾ? ಎಂಬುದನ್ನು ಪರೀಕ್ಷಿಸಿ.

# ಕಳೆಯಿರಿ

ಮೊದಲು ಒಂದು ಪ್ರಶ್ನೆಯನ್ನು ನಿಮಗೋಸ್ಕರ ಬಿಡಿಸಿ ತೋರಿಸಿದ್ದೇನೆ. ಇಂತಹ ಮತ್ತಷ್ಟು ಪ್ರಶ್ನೆಗಳನ್ನು ನಿಮಗೆ ನೀವೇ ಹಾಕಿಕೊಳ್ಳಿರಿ. ನಿಮ್ಮ ಸ್ನೇಹಿತರಿಗೋಸ್ಕರ ಇಂತಹ ಪ್ರಶ್ನೆಗಳನ್ನು ರೂಪಿಸಿ ಆಟವಾಡಿರಿ.




$$\begin{array}{r} 6 \\ -\ 3 \\ \hline 3 \\ \hline \end{array}$$

6 ಉಂಡೆಗಳಲ್ಲಿ 3 ಉಂಡೆಗಳನ್ನು ತೆಗೆದರೆ 3 ಉಂಡೆಗಳು ಉಳಿಯುತ್ತವೆ.



............. ಹಕ್ಕಿಗಳಲ್ಲಿ ................. ಹಕ್ಕಿಗಳು ಹಾರಿ ಹೋದರೆ ......... ಹಕ್ಕಿಗಳು ಉಳಿಯುತ್ತವೆ.





.......... ಹೂವುಗಳಲ್ಲಿ ......... ಹೂವುಗಳನ್ನು ಕಿತ್ತರೆ ............. ಹೂವುಗಳು ಉಳಿದಿರುತ್ತವೆ.

| | | | | | |
|---|---|---|---|---|---|
| 4 | 7 | 6 | 8 | 6 | 8 |
| − 3 | − 5 | − 1 | − 5 | − 3 | − 2 |
| ____ | ____ | ____ | ____ | ____ | ____ |
| ____ | ____ | ____ | ____ | ____ | ____ |

# ಭಾವಣಿ

ರಾತ್ರಿಯಲ್ಲಿ ರವಿಯ ಮನೆಯ ಭಾವಣಿ ಸೋರಲಾರಂಭಿಸಿತು. ಗಾಢವಾದ ಕತ್ತಲಿತ್ತು.





ಆತನ ಹೆಂಡತಿ ದೀಪ ಉರಿಸಿದಳು. ಕೇವಲ ಒಂದು ವಾರದ ಹಿಂದೆಯೇ ರವಿಯು ಭಾವಣೆಯ ಮೇಲೆ ಒಣ ಹುಲ್ಲು ಹೊದಿಸಿದ್ದ.



ಮಳೆಯ ಕಾರಣ ಹುಲ್ಲು ಅತ್ತಿತ್ತ ಜರುಗಿತ್ತು. ರವಿಯು ಭಾವಣೆಯ ಮೇಲೇರಿ ಅದನ್ನು ಸರಿಪಡಿಸಿದ. ಭಾವಣೆ ಸೋರುವುದು ನಿಂತಿತು.

**ವಿರುದ್ಧ ಪದಗಳು**

ಉರಿಸು x ಆರಿಸು

ದಿನ x ರಾತ್ರಿ

ಕತ್ತಲೆ x ಬೆಳಕು

ಏರುವುದು x ಇಳಿಯುವುದು

**ಪ್ರಾಸಬದ್ಧ ಪದಗಳು**

ಕಲೆ – ಬೆಲೆ


ಕಲ್ಲು – ಹುಲ್ಲು

ಅಡ್ಡ – ಗುಡ್ಡ


ದೀಪ – ಪಾಪ

# ಆಕೃತಿ ರಚಿಸುವ ಆಟ

ಕಡ್ಡಿಗಳನ್ನಾಗಲಿ ಅಥವಾ ಬೆತ್ತಗಳನ್ನಾಗಲಿ ಸಂಗ್ರಹಿಸಿಕೊಳ್ಳಿರಿ. ಅವನ್ನೆಲ್ಲಾ ಒಂದೇ ಉದ್ದಳತೆಯ ತುಂಡುಗಳನ್ನಾಗಿ ಕತ್ತರಿಸಿಕೊಳ್ಳಿರಿ. ಆ ತುಂಡುಗಳಿಂದ ವಿವಿಧ ಆಕೃತಿಗಳನ್ನು ರಚಿಸಿರಿ. ಆನಂತರ ಅವುಗಳ ಅರ್ಧ ಅಳತೆಯ ಆಕೃತಿಗಳನ್ನು ರಚಿಸಿರಿ.



- ಪೊರಕೆ ಕಡ್ಡಿಗಳನ್ನು ಸಂಗ್ರಹಿಸಿ, ಅವುಗಳಿಂದಲೂ ಇಂತಹ ಮತ್ತಷ್ಟು ಆಕೃತಿಗಳನ್ನು ರಚಿಸಿರಿ.
- ಆ ಆಕೃತಿಗಳ ಅರ್ಧ ಅಳತೆಯ ಆಕೃತಿಗಳನ್ನು ರಚಿಸಲು ಪ್ರಯತ್ನಿಸಿ.
- ನಿಮ್ಮ ಸ್ನೇಹಿತರಿಗೂ ಸಹ ಇಂತಹ ಆಕೃತಿಗಳನ್ನು ರಚಿಸಿ ಅವುಗಳ ಅರ್ಧಾಕೃತಿಗಳನ್ನು ರಚಿಸಲು ಹೇಳಿರಿ.



# ಅಡುಗೆ ಮನೆಯ ಅವಾಂತರ

## ಅಡುಗೆ ಮನೆಯಲ್ಲಿ ಗಡಿಬಿಡಿ

ಅಪ್ಪ ಅಮ್ಮ ಅಜ್ಜ ಅಕ್ಕ
ಎಲ್ಲರು ಕೂಡಿ ಪಗಡೆ ಆಡಿ
ಬಗೆ ಬಗೆ ತಿನಿಸನು ತಿಂದರು ಕೂಡಿ
ಆಗಿತ್ತಾಗ ಸಂಜೆಯ ವೇಳೆ
ಒಲೆ ಮೇಲೆ ಅಕ್ಕಿ ಬೇಳೆ
ಕೇಳಿತು ಸದ್ದು ಡಬಡಬ ದಡಬಡ
ಸದ್ದನು ಕೇಳಿ ಓಡಿದಳಕ್ಕ
ಎದ್ದು ಬಿದ್ದು ಕೋಣೆಯ ಒಳಗೆ
ಪಾತ್ರೆ ಉರುಳಿತು ಗೋಡೆಯ ಕಡೆಗೆ
ಬೆಕ್ಕದು ಬೆದರಿ ಚೀರಿತು ಮ್ಯಾಂವ್, ಮ್ಯಾಂವ್
ಮುದ್ದಿನ ನಾಯಿ ಬೊಗಳಿತು ಬೌ ಬೌ ಬೌ
ಒಡೆಯಿತು ಮೊಸರಿನ ಗಡಿಗೆ
ಬೆಕ್ಕು ಓಡಿತು ಅದರ ಕಡೆಗೆ
ಅನ್ನದ ಮಡಕೆ ಬಿದ್ದಿತು ಕೆಳಗೆ
ನಾಯಿಗೆ ಖುಷಿಯು ಒಳಗೊಳಗೆ

- ಬೆಕ್ಕು ಹೇಗೆ ಸದ್ದು ಮಾಡುತ್ತದೆ?
- ಬೌ ಬೌ ಎಂದು ಕೂಗುವ ಪ್ರಾಣಿ ಯಾವುದು?
- ಸದ್ದು ಹೇಗೆ ಕೇಳಿತು?
- ಯಾವ ಗಡಿಗೆ ಒಡೆಯಿತು?
- ತಟ್ಟೆಯು ಎಲ್ಲಿ ಉರುಳಿತು.

| | |
|---|---|
| ಒಳಗೆ | ಹೊರಗೆ |
| ಮೇಲೆ | ............ |
| ಪಾತ್ರೆ | ಪಾತ್ರೆಗಳು |
| ತಟ್ಟೆ | ............ |



8

# ಮಣಿಗಳು ಮತ್ತು ಸರ

 ಮಣಿ



ಹತ್ತು ಮಣಿಗಳು ಒಂದು ಸರ



ಒಂದು ಸರ ನಾಲ್ಕು ಮಣಿಗಳು 14 ಮಣಿಗಳು



ಒಂದು ಸರ ಐದು ಮಣಿಗಳು 15 ಮಣಿಗಳು



2 ಸರ ಮತ್ತು ........ ಮಣಿಗಳು = 23 ಮಣಿಗಳು.



2 ಸರ ಮತ್ತು 7 ಮಣಿಗಳು = ................

2 ಸರ ಮತ್ತು 8 ಮಣಿಗಳು = ................

1 ಸರ ಮತ್ತು 9 ಮಣಿಗಳು = .............

ಹತ್ತು ಬಿಡಿ

ದಾರದಲ್ಲಿ ಮಣಿ ಪೋಣಿಸಿ ಸರ ಮಾಡಿ. ಮಣಿಗಳು ಸಿಕ್ಕದಿದ್ದರೆ ಬಿರುಡೆ ಅಥವಾ ಮತ್ಯಾವುದಾದರೂ ವಸ್ತುಗಳನ್ನು ತೆಗೆದುಕೊಂಡು ಸರ ಪೋಣಿಸಿರಿ.

1 ಸರ 1 ಮಣಿ = 11 ಮಣಿಗಳು

1 ಸರ 2 ಮಣಿ = 12

1 ಸರ 3 ಮಣಿ = 13

1 ಸರ 4 ಮಣಿ = 14

1 ಸರ 5 ಮಣಿ = .......

1 ಸರ 6 ಮಣಿ = 16

1 ಸರ 7 ಮಣಿ = .......

1 ಸರ 8 ಮಣಿ = .......


1 ಸರ 9 ಮಣಿ = .......

2 ಸರ ........ = 20

2 ಸರ 1 ಮಣಿ = .......

ಇದೇ ರೀತಿ ಸ್ಲೇಟಿನ ಮೇಲೆ ಮತ್ತಷ್ಟು ಉದಾಹರಣೆಗಳನ್ನು ಬರೆಯಿರಿ ಮತ್ತು ಸರ ಹಾಗೂ ಮಣಿಗಳೊಡನೆ ಅಭ್ಯಾಸ ಮಾಡಿರಿ.

# ಮುಂದೇನಿರಬಹುದು?



- ನಾಣ್ಯಗಳನ್ನು ಸಂಗ್ರಹಿಸಿ ಬೇರೆ ಬೇರೆ ವಿಧಾನಗಳಿಂದ ಆಕೃತಿಗಳನ್ನು ರಚಿಸಿರಿ.
- ಸ್ಲೇಟಿನ ಮೇಲೆ ಮತ್ತಷ್ಟು ಆಕೃತಿಗಳನ್ನು ಬರೆಯಿರಿ.
- ಮುಂದಿನ ಆಕೃತಿ ಏನಿರಬಹುದೆಂದು ಊಹಿಸಲು ನಿಮ್ಮ ಸ್ನೇಹಿತರಿಗೆ ಹೇಳಿರಿ.

# ಒಗಟುಗಳು

1. ಗಿಡ ಗಿಡವಾಗಿ, ಗಿಡ ತುಂಬ ಕಾಯಾಗಿ, ಪಂಚ ತಂತ್ರವಾಗಿ ಪನ್ನೀರು ಎಲೆಯಾಗಿ, ಉಗುಳುವದದು ಸಿಪ್ಪೆ ತಿನ್ನುವುದು ಬೀಜ.

2. ಕೆಂಪು ಹುಡುಗನ ಹೊಟ್ಟೆ ತುಂಬಾ ಬಂಗಾರದ ನಾಣ್ಯಗಳು

3. ಊರೆಲ್ಲಾ ಸುತ್ತುತ್ತೆ ಮೂಲೆಯಲ್ಲಿ ಹೋಗಿ ಕೂರುತ್ತೆ

4. ಒಂದು ತೇಲುತ್ತೆ, ಒಂದು ಮುಳುಗುತ್ತೆ, ಒಂದು ಕರಗುತ್ತೆ

5. ತಾಯಿ ಕುಂತಿದ್ದಾಳೆ. ಮಗಳು ಓಡಾಡುತ್ತಾಳೆ

6. ಮೈಯೆಲ್ಲಾ ಮುಳ್ಳು ಒಳಗೆಲ್ಲಾ ಗಿಣ್ಣು

7. ಚೊಕ್ಕದ ಮನೆಗೆ ಚಿನ್ನದ ಬೀಗ

8. ಚೋಟುದ್ದ ಹುಡುಗಿ ಮಾರುದ್ದ ಕೂದಲು

9. ಮುಂದೆ ಹೋಗೋರಿಬ್ಬರು ಹಿಂದೆ ಬರುವವರಿಬ್ಬರು

10. ಬಿಳಿ ಹುಡುಗನಿಗೆ ಕಪ್ಪು ಟೋಪಿ

11. ಅಂಗಡಿಯಿಂದ ಕೊಂಡು ತರುತ್ತಾರೆ ಮುಂದಿಟ್ಟುಕೊಂಡು ಅಳುತ್ತಾರೆ.

12. ಆಗಾಗ್ಗೆ ಬಂದು ಹೋಗುತ್ತೀನಿ ನೆಂಟನಲ್ಲ, ರಾತ್ರಿ ವೇಳೆ ಇರುವೆ ಕಳ್ಳನಲ್ಲ.


13. ಅಕ್ಕನ ಮನೆಗೆ ತಂಗಿ ಹೋಗ್ತಾಳೆ, ತಂಗಿ ಮನೆಗೆ ಅಕ್ಕ ಹೋಗೋಲ್ಲಾ.

ಉತ್ತರಗಳು: 1. ಕಳ್ಳಿ ಕಾಯಿ 2. ಒಣಮೆಣಸಿನಕಾಯಿ 3. ಚಪ್ಪಲಿ 4. ಎಲೆ, ಅಡಿಕೆ, ಸುಣ್ಣ 5. ಬಿಂದಿಗೆ–ಚೆಂಬು 6. ಹಲಸಿನ ಹಣ್ಣು 7. ಮೂಗುತಿ. 8. ಸೂಜಿದಾರ 9. ನೆರಳು 10. ಬೆಂಕಿ ಕಡ್ಡಿ 11. ಈರುಳ್ಳಿ 12. ವಿದ್ಯುತ್ ಬೆಳಕು 13. ಸೇರು, ಪಾವು

# ಕೂಡಿರಿ ಮತ್ತು ಕಳೆಯಿರಿ

$3 + 4 =$    $7 - 4 =$

$4 + 3 =$    $7 - 3 =$



$2 + 4 =$    $6 - 2 =$

$4 + 2 =$    $6 - 4 =$




$5 + 4 =$    $9 - 4 =$

$4 + 5 =$    $9 - 5 =$



$5 + 3 =$    $8 - 5 =$

$3 + 5 =$    $8 - 3 =$



- ಅಂಕಿ ಕಾರ್ಡುಗಳನ್ನು ಬಳಸಿ ಕೂಡುವ ಮತ್ತು ಕಳೆಯುವ ಮತ್ತಷ್ಟು ಉದಾಹರಣೆಗಳನ್ನು ಅಭ್ಯಾಸ ಮಾಡಿರಿ.
- ಕಲ್ಲುಗಳು ಮತ್ತು ಚಿಕ್ಕ ಕಾರ್ಡುಗಳ ಸಹಾಯದಿಂದ ಇನ್ನಷ್ಟು ಲೆಕ್ಕಗಳನ್ನು ಮಾಡಿರಿ.
- ಬೀಜಗಳು, ಕಲ್ಲುಗಳನ್ನು ತೆಗೆದುಕೊಂಡು ಒಂದಕ್ಕೊಂದು ಕೂಡುವ ಅಥವಾ ಒಂದರೊಡನೊಂದು ಕಳೆಯುವ ಅಭ್ಯಾಸ ಮಾಡಿರಿ.

# ಕವಿತೆ ಓದಿ ಮುದುಕನ ಚಿತ್ರ ಬಿಡಿಸಿ

ಕೈಯಲಿ ಊರುತ ಉದ್ದನೆ ಕೋಲು
ತಲೆಯ ಮೇಲೆ ಬಣ್ಣದ ರುಮಾಲು
ಅಜ್ಜ ಬಂದ ಅಜ್ಜ
ಬಗೆ ಬಗೆ ತಿನಿಸು
ಬೆಂಡು ಬತ್ತಾಸು ಕಡಲೆ ಪುರಿ
ತಂದ ಅಜ್ಜ ತಂದ
ಅಜ್ಜ ಬಂದ ನಮ್ಮಜ್ಜ

| | | | |
|---|---|---|---|
| ಕೋಲು | ಉದ್ದನೆ | – | ಗಿಡ್ಡನೆ |
| ಶಾಲು | ಕೆಳಗೆ | – | .......... |
| ರುಮಾಲು | | | |

- ಇನ್ನೂ ಇಂತಹ ಪದಗಳನ್ನು ಪುಸ್ತಕದಿಂದ ಹುಡುಕಿ ಬರೆಯಿರಿ.


# ಇವರಿಬ್ಬರಿಗೆ ಸಮನಾಗಿ ಹಂಚಿರಿ

ಯಾರಿಗೂ ಹೆಚ್ಚಾಗಲಿ ಕಡಿಮೆಯಾಗಲಿ ಬರಕೂಡದು

ಎರಡು ಮನೆಗಳಲ್ಲಿ ಸಮನಾಗಿ ದೀಪಗಳನ್ನು ಇಡಿ.



ಇಲ್ಲಿರುವ ಕಪ್ಪುಗಳನ್ನು ಬಕೀಟುಗಳಿಗೆ ಸಮನಾಗಿ ಹಂಚಿ.




ಮೀನಾ ಮತ್ತು ಶಶಿಗೆ ಸಮನಾಗಿ ಉಂಡೆಗಳನ್ನು ಕೊಡಿರಿ.



ಕೋತಿಗೂ ಆನೆಗೂ ಸಮನಾಗಿ ಬಾಳೆ ಹಣ್ಣುಗಳನ್ನು ಕೊಡಿರಿ.



ಎರಡು ಚಿಟ್ಟೆಗಳಿಗೂ ಹೂಗಳನ್ನು ಸಮನಾಗಿ ಹಂಚಿರಿ.



ಪ್ರತಿಯೊಂದು ದೀಪಕ್ಕೆ ಬದಲಾಗಿ ಕಲ್ಲುಗಳನ್ನು ತೆಗೆದುಕೊಳ್ಳಿ. ಕಲ್ಲುಗಳನ್ನು ಎರಡು ಮನೆಗಳಲ್ಲಿ ಸಮನಾಗಿ ಹಂಚಿರಿ. ಇತರ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಇದೇ ರೀತಿ ಮಾಡಿರಿ. ಇದೇ ರೀತಿ ಇನ್ನಷ್ಟು ಲೆಕ್ಕಗಳನ್ನು ನೀವೇ ಹಾಕಿಕೊಂಡು ಮಾಡಿರಿ.

# ಸಂಖ್ಯಾ ಪಟ

| | | | | |
|---|---|---|---|---|
| 1 | | 21 | 31 | 41 |
| 2 | 12 | 22 | 32 | |
| | | | | 43 |
| | | | 34 | |
| 5 | | | | |
| | | | | 46 |
| 7 | | | | |
| | 18 | | 38 | |
| | | 29 | | |
| 10 | 20 | | | 50 |

ನಾನು ಹೇಳಿದಂತೆಯೇ ಮಾಡಿರಿ.

- ಎಣಿಸಿರಿ.
  - ☞ 1ರಿಂದ 20 ರಲ್ಲಿ ಎಷ್ಟು ಮನೆಗಳು ಖಾಲಿ ಇವೆ?
  - ☞ 30 ರಿಂದ 50 ರಲ್ಲಿ ಎಷ್ಟು ಖಾಲಿ ಇವೆ?
  - ☞ 1ರಿಂದ 50 ರವರೆಗೆ ಎಷ್ಟು ಮನೆಗಳಲ್ಲಿ ಸಂಖ್ಯೆಗಳನ್ನು ಬರೆಯಲಾಗಿದೆ?
- ಖಾಲಿ ಮನೆಗಳಲ್ಲಿ ಸೂಕ್ತ ಸಂಖ್ಯೆ ಬರೆಯಿರಿ.
- 15ರ ನಂತರ ಯಾವ ಸಂಖ್ಯೆ ಬರುತ್ತದೆ?
- 19ರಿಂದ 16ರವರೆಗೆ ಹೋಗುವಾಗ ಯಾವ ಯಾವ ಸಂಖ್ಯೆಗಳು ಸಿಕ್ಕುತ್ತವೆ?
- 23ರಿಂದ 28ರವರೆಗೆ ಹೋಗಲು ಎಷ್ಟು ಮನೆ ಮುಂದೆ ಹೋಗಬೇಕು?
- 18ರಿಂದ 11ರವರೆಗೆ ತಿರುಗಿ ಬರಲು ಯಾವ ಯಾವ ಮನೆಗಳನ್ನು ದಾಟಬೇಕು?
- 25ಕ್ಕಿಂತ 3ರಷ್ಟು ದೊಡ್ಡದಾಗಿರುವ ಸಂಖ್ಯೆ ಯಾವುದು?

ಇದೇ ರೀತಿ ಮತ್ತಷ್ಟು ಅಭ್ಯಾಸಗಳನ್ನು ಮಾಡಿರಿ ಹಾಗೂ ಬೇಗ ಗುರುತಿಸುವ ಆಟವನ್ನು, ಸ್ನೇಹಿತರನ್ನು ತಂಡಗಳಾಗಿ ವಿಂಗಡಿಸಿ. ಆಡಿರಿ.

10ರ ತರುವಾಯ ಪ್ರತಿ 10ನೆಯ ಮನೆಯಲ್ಲಿ ಹಸಿರು ಬಣ್ಣ ತುಂಬಿರಿ. ಯಾವ ಯಾವ ಮನೆಗಳಲ್ಲಿ ಬಣ್ಣ ತುಂಬಿದಂತಾಯಿತು.

2ರ ನಂತರ ಪ್ರತಿ ಎರಡನೆಯ ಮನೆಗೆ ಕೆಂಪು ಬಣ್ಣ ತುಂಬಿರಿ. (ಹಸಿರು ಬಣ್ಣದ ಮನೆಗಳನ್ನು ಹಾಗೆ ಬಿಡಿರಿ)

ಉಳಿದ ಮನೆಗಳಿಗೆ ಹಳದಿ ಬಣ್ಣ ತುಂಬಿರಿ.

30ರವರೆಗೆ ಯಾವ ಮನೆಗಳು ಹಳದಿ ಬಣ್ಣವಾದವು? 50ರವರೆಗೆ ಯಾವ ಮನೆಗಳು ಕೆಂಪು ಬಣ್ಣವಾದವು?

# ಹಾ ! ಮೆಣಸಿನ ಕಾಯಿ

ಮಂಜು ಎಂಬ ಆನೆಗೆ ಮೆಣಸಿನಕಾಯಿ ತುಂಬಾ ರುಚಿಸುತ್ತಿತ್ತು. ಒಂದ ಸಲ ಅದು ಮೆಣಸಿನ ಕಾಯಿಯ ದೊಡ್ಡ ಗಿಡವನ್ನು ನೋಡಿತು. ಮಂಜು ಥಟ್ಟನೆ ಇಡೀ ಗಿಡವನ್ನು ಕಿತ್ತು ತಿಂದು ಬಿಟ್ಟಿತು. ಆದರೆ ಮೆಣಸಿನ ಕಾಯಿ ತುಂಬಾ ಖಾರವಾಗಿತ್ತು. ಮಂಜು 'ಖಾರ ಖಾರ' ಎಂದು ಚೀರಿತು.


ಮುಖವೆಲ್ಲಾ ಕೆಂಪಾಯಿತ್ತು. ಮಂಜು ಕೆರೆಗೆ ಬಂದಿತು. ಅಲ್ಲಿ ಎಷ್ಟು ನೀರು ಕುಡಿದರೂ ಖಾರ ಕಡಿಮೆಯಾಗಲಿಲ್ಲ. ತಕ್ಷಣ ಮಂಜುವಿಗೆ ಮಿಠಾಯಿ ಮಾರಾಟಗಾರನ ನೆನಪು ಬಂತು. ಮಿಠಾಯಿ ತಿಂದರೆ ಖಾರ ಕಡಿಮೆಯಾಗುವುದೆಂದು ಅದು ಯೋಚಿಸಿತು.

ಓಡುತ್ತಾ, ಓಡುತ್ತಾ ಅದು ಮಿಠಾಯಿಗಾರನ ಅಂಗಡಿಗೆ ತಲುಪಿತು. "ಮಿಠಾಯಣ್ಣಾ, ಮಿಠಾಯಣ್ಣಾ, ನನಗೆ ಒಂದು ಮಿಠಾಯಿ ಕೊಡು" ಎಂದು ಕೇಳಿತು. ಆಗ ಮಿಠಾಯಣ್ಣ ಹೇಳಿದ "ಮಿಠಾಯಿಯನ್ನು ಕೊಡುತ್ತೇನೆ. ಒಂದು ಮರದ ಮೇಜು ತಂದು ಕೊಡುವೆಯಾ ?"

ಮಂಜು ಬುಸುಗುಟ್ಟುತ್ತಾ ಬಡಗಿ ಮುನಿಯಣ್ಣನ ಅಂಗಡಿಗೆ ತಲುಪಿತು. "ಮುನಿಯಣ್ಣ, ಮುನಿಯಣ್ಣ ನನಗೆ ಒಂದು ಮೇಜು ಬೇಕು. ತಂದು ಕೊಡುವೆಯಾ? ನೀನು ಮೇಜನ್ನು ಕೊಟ್ಟರೆ ಮಿಠಾಯಿ ಅಣ್ಣ ನನಗೆ ಮಿಠಾಯಿ ಕೊಡುತ್ತಾನೆ" ಎಂದು ಹೇಳಿತು.

ಮುನಿಯಣ್ಣ ಹೇಳಿದ "ಮೇಜನ್ನು ಕೊಡುತ್ತೇನೆ. ಆದರೆ ಅದಕ್ಕೆ ಮೊದಲು ನೀನು ನನಗೆ ಒಂದು ಮಚ್ಚು ತಂದು ಕೊಡು."

ಪಾಪ ಮಂಜು ಕಮ್ಮಾರನ ಬಳಿಗೆ ಹೋಗಿ "ಕಮ್ಮಾರಣ್ಣಾ, ಕಮ್ಮಾರಣ್ಣಾ, ನನಗೊಂದು ಮಚ್ಚು ಬೇಕು. ಕೊಡುವೆಯಾ? ಮಚ್ಚನ್ನು ನಾನು ಮುನಿಯಣ್ಣನಿಗೆ ಕೊಡುತ್ತೇನೆ. ಮುನಿಯಣ್ಣ ನನಗೆ ಒಂದು ಮೇಜು ಕೊಡುತ್ತಾನೆ. ಮೇಜನ್ನು ಮಿಠಾಯಣ್ಣನಿಗೆ ಕೊಡುತ್ತೇನೆ. ಮಿಠಾಯಣ್ಣ ನನಗೆ






10

ಮಿಠಾಯಿ ಕೊಡುತ್ತಾನೆ" ಎಂದು ಹೇಳಿತು.

ಕಮ್ಮಾರಣ್ಣ ಹೇಳಿದ "ಮಚ್ಚನ್ನು ಕೊಡುತ್ತೇನೆ. ಆದರೆ ಮೊದಲು ನೀನು ನನಗೆ ಒಂದು ಮಡಕೆ ತಂದು ಕೊಡು".

ಮಂಜು ಕುಂಬಾರ ಮಾದಯ್ಯನ ಮನೆಗೆ ಓಡಿತು. ಅಲ್ಲಿ "ಮಾದಣ್ಣಾ, ಮಾದಣ್ಣಾ ನನಗೆ ಒಂದು ಮಡಕೆ ಕೊಡುವೆಯಾ? ನೀನು ಮಡಕೆ ಕೊಟ್ಟರೆ ಅದನ್ನು ಕಮ್ಮಾರಣ್ಣನಿಗೆ ಕೊಡುತ್ತೇನೆ. ಕಮ್ಮಾರಣ್ಣ ಮಚ್ಚನ್ನು ಕೊಡುತ್ತಾನೆ. ಅದನ್ನು ಮುನಿಯಣ್ಣನಿಗೆ ಕೊಟ್ಟರೆ ಮೇಜನ್ನು ಕೊಡುತ್ತಾನೆ. ಮೇಜನ್ನು ಮಿಠಾಯಣ್ಣನಿಗೆ ಕೊಟ್ಟರೆ ನಿನಗೆ ಮಿಠಾಯಿ ಕೊಡುತ್ತಾನೆ".

ಕುಂಬಾರಣ್ಣ ಹೇಳಿದ "ಮಡಕೆಯನ್ನು ಕೊಡುತ್ತೇನೆ. ಆದರೆ ಮೊದಲು ನೀನು ಮಣ್ಣನ್ನು ತುಳಿದು ಹದ ಮಾಡು. ಮಂಜು ಮಣ್ಣನ್ನು ತುಳಿದು ಹದ ಮಾಡಿತು. ಕುಂಬಾರಣ್ಣ ಮಡಕೆ ಕೊಟ್ಟನು. ಮಡಕೆಯನ್ನು ತೆಗೆದುಕೊಂಡು ಹೋಗಿ ಕಮ್ಮಾರಣ್ಣನಿಗೆ ಕೊಟ್ಟಿತು. ಕಮ್ಮಾರಣ್ಣ ಮಚ್ಚನ್ನು ಕೊಟ್ಟನು. ಮಚ್ಚನ್ನು ತೆಗೆದುಕೊಂಡು ಹೋಗಿ ಮುನಿಯಣ್ಣನಿಗೆ ಮಂಜು ನೀಡಿತು. ಮುನಿಯಣ್ಣ ಮೇಜು ಕೊಟ್ಟನು. ಅದನ್ನು ತೆಗೆದುಕೊಂಡು ಹೋಗಿ ಮಿಠಾಯಣ್ಣನಿಗೆ ಕೊಟ್ಟಿತು. ಮಿಠಾಯಣ್ಣ ಮಂಜುಗೆ ಮಿಠಾಯಿ ಕೊಟ್ಟನು. ಮಂಜು ಕೂಡಲೇ ಮಿಠಾಯಿ ತಿಂದು ಬಿಟ್ಟಿತು. ಮಿಠಾಯಿ ತಿನ್ನುತ್ತಲೇ ಅದಕ್ಕೆ ಖಾರ ಕಡಿಮೆಯಾಯಿತು. ಸ್ವಲ್ಪ ಕಾಲದವರೆಗೆ ಮಂಜುವಿಗೆ ತುಂಬಾ ಖುಷಿಯೆನಿಸಿತು. ಆದರೆ ಕೆಲ ಕಾಲದ ನಂತರ ಮತ್ತೆ ಮೆಣಸಿನಕಾಯಿ ನೆನಪು ಬರಲಾರಂಭಿಸಿತು.



'ಮ'ಯಿಂದ ಆರಂಭವಾಗುವ ಶಬ್ದಗಳಿಗೆ ಸುತ್ತುಗೆರೆ ಎಳೆಯಿರಿ. ವಿವಿಧ ಉದ್ಯೋಗ ಮಾಡುವವರ ಪಟ್ಟಿ ತಯಾರಿಸಿ. ಚಿತ್ರ ಸಂಗ್ರಹಿಸಿ. ಕಸುಬುಗಳ ಪರಿಚಯ ಮಾಡಿ.

# ಲಕ್ಷ್ಮಿಯ ಚೀಲ



ಲಕ್ಷ್ಮಿಯ ಚೀಲದಲ್ಲಿ ಏನೇನಿದೆ?

ಈ ಅಕ್ಷರಗಳ ಮೇಲೆ ಅಡ್ಡಗೆರೆ ಹಾಕಿರಿ.
ಬ, ಕ, ರಾ, ರಿ, ಯ

| | | | | |
|---|---|---|---|---|
| ಬ | ಕ | ರಾ | ರಿ | ಯ |
| ಕ | ರಾ | ಬ | ರಿ | ಯ |
| ರಿ | ಬ | ಕ | ರಾ | ಯ |
| ಬ | ಕ | ರಿ | ರೆ | ಯ |
| ಮ | ಕ | ರಾ | ರ | ಬ |

ಈ ಅಕ್ಷರಗಳ ಮೇಲೆ ಅಡ್ಡಗೆರೆ ಹಾಕಿರಿ
ಕ, ಲ, ಚ, ಕಾ, ಅ

| | | | | |
|---|---|---|---|---|
| ಲ | ಕ | ಚ | ಕಾ | ಅ |
| ಇ | ಚ | ಕಾ | ಲಿ | ಕ |
| ಚ | ಕಾ | ಅ | ಲ | ಕ |
| ಕಾ | ಅ | ಚ | ಕ | ಲ |
| ಚ | ಕಾ | ಅ | ಲ | ಕ |

ಏನು ಉಳಿಯಿತು?
ಉಳಿದವುಗಳನ್ನು ಜೋಡಿಸಿ ಶಬ್ದ ಮಾಡಿರಿ.
ಉಳಿದುದರ ಚಿತ್ರ ಬರೆಯಿರಿ.

ಈ ಅಕ್ಷರಗಳ ಮೇಲೆ ಅಡ್ಡ ಗೆರೆ ಹಾಕಿರಿ
ಪ, ಬಾ, ಳಿ, ಹ, ರ

| | | | | |
|---|---|---|---|---|
| ಪ | ಬ | ಳಿ | ಹ | ರ |
| ರ | ಳಿ | ಬ | ಪ | ಹ |
| ಬಾ | ರ | ಳಿ | ಪ | ಹ |
| ಹ | ಪ | ರ | ಬಾ | ಳಿ |
| ಳಿ | ಹ | ಬಾ | ರ | ಪ |


ಈ ಅಕ್ಷರಗಳ ಮೇಲೆ ಅಡ್ಡಗೆರೆ ಹಾಕಿರಿ
ತ, ದ, ನಾ, ಪಾ, ನೆ

| | | | | |
|---|---|---|---|---|
| ತ | ದ | ನಾ | ಪಾ | ನೆ |
| ಬ | ಳ | ದ | ನಾ | ಪ |
| ನೆ | ದ | ತ | ಪಾ | ನಾ |
| ದ | ತ | ನೆ | ನೆ | ಪಾ |
| ಪಾ | ದ | ತ | ನೆ | ನಾ |

- ಅಕ್ಷರ ಕಾರ್ಡುಗಳನ್ನು ಜೋಡಿಸಿ ಹೆಸರು ರಚಿಸಿರಿ.
- ಸ್ಲೇಟಿನ ಮೇಲೆ ಇದೇ ರೀತಿ ಮತ್ತಷ್ಟು ಗುಂಪುಗಳನ್ನು ಮಾಡಿರಿ. ಮತ್ತು ಹೆಸರು ಹುಡುಕುವ ಆಟ ಆಡಿರಿ.

# ಆಕೃತಿಗಳು

ಕೆಳಗಿನ ಚಿತ್ರವನ್ನು ಮೇಲಿನ ಚಿತ್ರದಂತೆ ಬರೆಯಿರಿ.



ಎಷ್ಟು ● ಇವೆ?

ಎಷ್ಟು ▭ ಇವೆ?

ಒಟ್ಟು ______

ಎಷ್ಟು ▲ ಇವೆ?

ಎಷ್ಟು △ ಇವೆ?

ಒಟ್ಟು ______

▭ ಗಳಲ್ಲಿ ಕೆಂಪು ಬಣ್ಣ ತುಂಬಿ.


△ ಗಳಲ್ಲಿ ಹಸಿರು ಬಣ್ಣ ತುಂಬಿ.

● ಗಳಲ್ಲಿ ಹಳದಿ ಬಣ್ಣ ತುಂಬಿ.

ಒಟ್ಟು ಎಷ್ಟು △ ಬಣ್ಣಗಳಿವೆ?

ಒಟ್ಟು ಎಷ್ಟು ▭ ಬಣ್ಣಗಳಿವೆ?

ಒಟ್ಟು ಎಷ್ಟು ○ ಬಣ್ಣಗಳಿವೆ?



- ಕಲ್ಲು, ಬಳೆಚೂರು, ಧಾನ್ಯಗಳು ಅಥವಾ ಬೀಜಗಳನ್ನು ಸಂಗ್ರಹಿಸಿರಿ.

○ ದ ಮೇಲೆ ಕಲ್ಲನ್ನಿಡಿರಿ. ● ದ ಮೇಲೆ ಕಡ್ಡಿ, ▲ ದ ಮೇಲೆ ಬಳೆ ಚೂರು ಮತ್ತು ▭ ದ ಮೇಲೆ ಯಾವುದಾದರೂ ಬೀಜವನ್ನಿಡಿರಿ.

- ಇದೇ ರೀತಿ ಬೇರೆ ಬೇರೆ ತೆರನಾದ ಮತ್ತಷ್ಟು ವಸ್ತುಗಳನ್ನು ಸಂಗ್ರಹಿಸಿರಿ.

# ವಸ್ತುಗಳು


ಸಂತೆಯು ಸೇರಿತು
ಗುಂಪದು ಆಯಿತು
ತಂಪಿನ ಮರಗಳ ಅಡಿಯಲ್ಲಿ
ಮಡಕೆ ಕುಡಿಕೆ ಚಾಪೆ ಮಾರುವರೆಲ್ಲ
ಸೇರಿದರಲ್ಲೇ ಮೂಲೆಯಲ್ಲಿ
ಖಾರ, ಪುರಿ, ಲಾಡು ಚಕ್ಕುಲಿ
ಕಾಗದ, ಕನ್ನಡಿ ಸೀಸೆಗಳನ್ನು
ಮಾರುವರೆಲ್ಲ ಸೇರಿದರು
ಪಕ್ಕದ ಊರಿನ ಟೋಪಿವಾಲನು
ಬಟ್ಟೆಯ ಮಾರಲು ಬಂದಿಹನು
ಟೋಪಿ ಚೀಲ ತಂದಿಹನು
ಚಪ್ಪಲಿ, ಧಾನ್ಯ ಹಣ್ಣಿನ ಅಂಗಡಿ
ಎಲ್ಲವು ಮಾರಲು ಬಂದಿಹರು

- ಮೇಲಿನ ವಸ್ತುಗಳ ಚಿತ್ರಗಳನ್ನು ಬರೆಯಿರಿ.
- ಅವುಗಳ ಹೆಸರುಗಳನ್ನು ಬರೆಯಿರಿ
- ಇದರಲ್ಲಿ ಯಾವ ವಸ್ತುಗಳನ್ನು ಕುಂಬಾರನು ತಯಾರಿಸುತ್ತಾನೆ?
- ಇದರಲ್ಲಿ ಯಾವ ವಸ್ತುಗಳನ್ನು ದರ್ಜಿ ತಯಾರಿಸುತ್ತಾನೆ?

# ಕಳೆಯುವುದು











- ಈ ಚಿತ್ರಗಳನ್ನು ಗಮನಿಸಿ ಕಥೆ ಕಟ್ಟಿರಿ.
- ಇಂತಹ ಚಿತ್ರಗಳಿಂದಲೇ ನಾವು ಕಳೆಯುವ ಅಭ್ಯಾಸ ಮಾಡಿಸಿದೆವು.
- ಈಗ ಮೇಲೆ ಕೊಟ್ಟ ಚಿತ್ರಗಳಿಂದ ಇಂತಹ ಮತ್ತಷ್ಟು ಪ್ರಶ್ನೆಗಳನ್ನು ರೂಪಿಸಿರಿ.


# ದುಪ್ಪಟ್ಟು ಮಾಡಿರಿ - ಅರ್ಧ ಮಾಡಿರಿ

ದುಪ್ಪಟ್ಟು ಅರ್ಧ











ನಿಮ್ಮ ಸುತ್ತಮುತ್ತಲ ಪರಿಸರದಲ್ಲಿ ದೊರೆಯುವ ಹೂವುಗಳು, ಎಲೆಗಳು ಮತ್ತು ಹಳೆಯ ಕಾಗದದ ತುಂಡುಗಳನ್ನು ಸಂಗ್ರಹಿಸಿರಿ. ಅವುಗಳನ್ನು ಅರ್ಧರ್ಧ ಮಾಡಲು ಪ್ರಯತ್ನಿಸಿರಿ.

# ಧ್ವನಿಯ ಆಟ




ಇಂತಹ ಇನ್ನಷ್ಟು ಜೊತೆಗಳನ್ನು ಸ್ಲೇಟಿನ ಮೇಲೆ ಬರೆಯಿರಿ.





ಈಗ ಚಿತ್ರಗಳನ್ನು ನೀವೇ ಆಯ್ಕೆ ಮಾಡಿ ಸ್ಲೇಟಿನ ಮೇಲೆ ಜೊತೆಗಳನ್ನು ಬರೆಯಿರಿ.



# ರಜಿಯಾ ಮನೆ

ರಜಿಯಾಳನ್ನು ಅವಳ ಮನೆಗೆ ತಲುಪಿಸಿರಿ. ಪ್ರತಿಯೊಬ್ಬರೊಡನೆ ರಜಿಯಾ ಏನೇನು ಮಾತುಕತೆ ನಡೆಸಿದಳೆಂಬುದನ್ನು ಹೇಳಿರಿ.



ದಾರಿಯಲ್ಲಿ ಯಾರು ಯಾರು ಭೇಟಿಯಾದರು.

ಹೋಗುವಾಗ ಬರುವಾಗ

- ನೀವು ಕಡ್ಡಿಗಳನ್ನು ಇಟ್ಟು ಇಂತಹ ಚಕ್ರವ್ಯೂಹವನ್ನು ರಚಿಸಬಲ್ಲಿರಾ?
- ಬೆಕ್ಕನ್ನು ಆಕಳವರೆಗೆ ಹಾವನ್ನು ಇಲಿಯವರೆಗೆ ತಲುಪಿಸಿರಿ.
- ದಾರಿಯಲ್ಲಿ ಹಾವಿಗೆ ಮೊಲ ಭೇಟಿಯಾಯಿತು. ಇದು ಸರಿಯೇ? ತಪ್ಪೆ?
- ಬೆಕ್ಕಿಗೆ ದಾರಿಯಲ್ಲಿ ಆನೆ ಭೇಟಿಯಾಗಬಹುದೆ?

# ಆಟ

ಹೊರಗಿನಿಂದ ಕೆಲವು ಕಡ್ಡಿಗಳನ್ನು ಕೆಲವು ಕಲ್ಲುಗಳನ್ನು ಆಯ್ದು ಸಂಗ್ರಹಿಸಿರಿ. ಎಲ್ಲಾ ಕಡ್ಡಿಗಳನ್ನು ಒಂದೇ ಅಳತೆಯ ತುಂಡುಗಳಾಗಿ ಮುರಿದುಕೊಳ್ಳಿರಿ. ಅದರಲ್ಲಿ ಹತ್ತು ಕಡ್ಡಿಗಳನ್ನು ಹೊರ ತೆಗೆದು ದಾರದಿಂದ ಕಟ್ಟು ಕಟ್ಟಿರಿ. ಇದೇ ರೀತಿ ಹತ್ತುತ್ತು ಕಡ್ಡಿಗಳ ಕೆಲವು ಕಟ್ಟುಗಳನ್ನು ಕಟ್ಟಿಕೊಳ್ಳಿರಿ.

ಈಗ ಕಟ್ಟು ಮತ್ತು ಕಡ್ಡಿಗಳ ಆಟವಾಡಿರಿ. ಆಟ ಎರಡು ತಂಡಗಳ ನಡುವೆ ನಡೆಯಬೇಕು. ಪ್ರತಿಯೊಂದು ತಂಡದಲ್ಲಿ ತೀರ ಹೆಚ್ಚೆಂದರೆ ಮೂರು ಮಕ್ಕಳಿರಬಹುದು. ಪ್ರತಿಯೊಂದು ತಂಡದವರು 4 ಕಟ್ಟುಗಳನ್ನು 9 ಬಿಡಿ ಕಡ್ಡಿಗಳನ್ನು ತೆಗೆದುಕೊಳ್ಳಲಿ. ಅದರೊಂದಿಗೆ ಪ್ರತಿ ತಂಡದವರು ತಮ್ಮೊಡನೆ ಹತ್ತತ್ತು ಕಲ್ಲುಗಳನ್ನು ಸಹ ಇಟ್ಟುಕೊಂಡಿರಲಿ.

ಯಾವುದಾದರೊಂದು ತಂಡದವರು ಆಟ ಆರಂಭಿಸಬೇಕು. ಆ ತಂಡದವರು ಎಷ್ಟು ಕಡ್ಡಿಗಳನ್ನು ಕೇಳುವರೋ ಇನ್ನೊಂದು ತಂಡದವರು ಅಷ್ಟು ಕಡ್ಡಿಗಳನ್ನು ತೋರಿಸಬೇಕು. ಕಟ್ಟು ಬಿಚ್ಚಕೂಡದು. ಒಂದು ವೇಳೆ ಯಾವುದಾದರೂ ತಂಡದವರಿಗೆ ಕಡ್ಡಿಗಳನ್ನು ತೋರಿಸಲು ಸಾಧ್ಯವಾಗದಿದ್ದರೆ ಕೇಳಿದ ತಂಡದವರು ಅಷ್ಟು ಕಡ್ಡಿಗಳನ್ನು ತೋರಿಸಬೇಕು. ಅವರು ತೋರಿಸಿದರೆ ತಮ್ಮ ಎದುರಾಳಿ ತಂಡದಿಂದ ಒಂದು ಕಲ್ಲನ್ನು ಪಡೆದುಕೊಳ್ಳಬೇಕು. ಹೀಗೆ ಆಟ ಮುಂದುವರೆಯಲಿ. ಆಟದ ಕೊನೆಯಲ್ಲಿ ಯಾವ ತಂಡ ಹೆಚ್ಚು ಕಲ್ಲುಗಳನ್ನು ಪಡೆದಿರುತ್ತದೆಯೋ ಆ ತಂಡವನ್ನು ಜಯಶಾಲಿ ತಂಡ ಎಂದು ಘೋಷಿಸಿರಿ.

ಇಂತಹ ಕೋಷ್ಟಕದಿಂದ ಆಟಕ್ಕೆ ಸಹಾಯವಾಗುತ್ತದೆ.

| ಒಂದು ಕಟ್ಟು | ಕಡ್ಡಿಗಳು |
|---|---|
| 1 ಕಟ್ಟು | 10 ಕಡ್ಡಿಗಳು |
| 2 ಕಟ್ಟು | 20 ಕಡ್ಡಿಗಳು |
| 3 ಕಟ್ಟು | 30 ಕಡ್ಡಿಗಳು |
| 4 ...................... | .................. |
| 5. ...................... | .................. |

ಕೆಲವು ಪ್ರಶ್ನೆಗಳನ್ನು ಕೇಳಿರಿ ನನಗೆ 13 ಕಡ್ಡಿಗಳು ಬೇಕು ಎಷ್ಟು ಕಟ್ಟು ಮತ್ತು ಎಷ್ಟು ಕಡ್ಡಿಗಳನ್ನು ಕೊಡುವಿರಿ ?

13 ಕಡ್ಡಿಗಳೆಂದರೆ 1 ಕಟ್ಟಿಗಿಂತ ಹೆಚ್ಚು 2 ಕಟ್ಟಿಗಿಂತ ಕಡಿಮೆ ಇವೆ. 1 ಕಟ್ಟಿಗಿಂತ ಎಷ್ಟು ಹೆಚ್ಚು?
13 ಕಡ್ಡಿಗಳನ್ನು ಕೊಡಬೇಕಾದರೆ 1 ಕಟ್ಟು ಮತ್ತು 3 ಕಡ್ಡಿಗಳನ್ನು ಕೊಡಬೇಕು.

25 ಕಡ್ಡಿಗಳು 2 ಕಟ್ಟುಗಳು 5 ಕಡ್ಡಿಗಳು

18 ಕಡ್ಡಿಗಳು ....... ಕಟ್ಟು ....... ಕಡ್ಡಿಗಳು

30 ಕಡ್ಡಿಗಳು ........ ಕಟ್ಟುಗಳು ............ ಕಡ್ಡಿಗಳು

11 ಕಡ್ಡಿಗಳು ........ ಕಟ್ಟು ....... ಕಡ್ಡಿಗಳು

ಇದೇ ರೀತಿ ಇನ್ನಷ್ಟು ಪ್ರಶ್ನೆಗಳನ್ನು ಹಾಕಿಕೊಳ್ಳಿರಿ. ಒಬ್ಬರ ಪ್ರಶ್ನೆಗಳಿಗೆ ಇನ್ನೊಬ್ಬರು ಉತ್ತರಿಸಿರಿ.

2 ಕಟ್ಟು 8 ಕಡ್ಡಿಗಳು 28 ಕಡ್ಡಿಗಳು


1 ಕಟ್ಟು 6 ಕಡ್ಡಿಗಳು ...............

2 ಕಟ್ಟು 3 ಕಡ್ಡಿಗಳು ...............

1 ಕಟ್ಟು 9 ಕಡ್ಡಿಗಳು ...............

2 ಕಟ್ಟು 2 ಕಡ್ಡಿಗಳು ...............

# ಹುಲಿರಾಯ



ರಾಮ ಮತ್ತು ರಹೀಮ ಪೀಪಾಯಿಗೆ ಒರಗಿಕೊಂಡು ಮಾತನಾಡುತ್ತಾ ಕುಳಿತಿದ್ದರು.

ಹುಲಿ ಅವರನ್ನು ನೋಡಿತು.



ಅವರ ಮೇಲೆ ನೆಗೆಯಲು ಹುಲಿಯು ಪೀಪಾಯಿ ಮೇಲೆ ಏರಿತು. ಆದರೆ ಪೀಪಾಯಿ ಜರುಗಿ ಓರೆಯಾಗತೊಡಗಿತು. 'ಆಹಾ! ನೋಡಿದೆ' ಎಂದು ರಹೀಮ ಹೇಳಿದ. ಅಷ್ಟರೊಳಗಾಗಿ ಹುಲಿ ಪೀಪಾಯಿನೊಳಗೆ ಬಿದ್ದು ಬಿಟ್ಟಿತು.

ರಹೀಮ ಮತ್ತು ರಾಮ ಸೇರಿ ಪೀಪಾಯಿಯನ್ನು ಸಂಪೂರ್ಣವಾಗಿ ಬೋರಲು ಹಾಕಿದರು. ಆದರೆ ಅದರ ಬಾಲ ಒಂದು ರಂಧ್ರದ ಮೂಲಕ ಹೊರಬಂದಿತ್ತು. ರಾಮ ಬಾಗಿ ಅದರ ಬಾಲವನ್ನು ಎಳೆದು ಹಿಡಿದುಕೊಂಡ.



ಮತ್ತು ಬಾಲದಲ್ಲಿ ಒಂದು ಗಂಟು ಹಾಕಿದರು. ಹಾ! ಹಾ! ಹಾ!.



# ಹುಡುಕಾಟ

ರೈಲು, ಕೋತಿ, ಬಳಪ, ದುಂಡು, ಉದ್ದ, ಅಗಲ, ಮನೆ, ಶಾಲೆ, ಹುಡುಗಿ, ಓಡು, ಓಡಿ, ಕೆಳಗೆ, ಆನೆ, ಮರ, ಫಲ, ಗಿಳಿ.

ಕೆಳಗಿನ ಗುಂಪಿನಲ್ಲಿ ಮೇಲಿನ ಶಬ್ದಗಳನ್ನು ಹುಡುಕಿರಿ ಮತ್ತು ಅದಕ್ಕೆ ಸುತ್ತು ಗೆರೆ ಎಳೆಯಿರಿ.

| | | | | | | | | | |
|---|---|---|---|---|---|---|---|---|---|
| ಇ | ಥ | ದ | ಯ | ರ | ಶ | ಪ | ಹು | ಡು | ಗಿ |
| ರೆ | ದುಂ | ಚ | ಕಾ | ಕು | ಸ | ಚ | ಝು | ಲ | ಳಿ |
| ಯ | ಡು | ಜ | ಐ | ಬ | ಳ | ಪ | ರಾ | ತ | ವ |
| ಗೆ | ಫ | ಷ | ತ | ದ | ಗಾ | ಶೇ | ಫ | ಸೊ | ನೆ |
| ಳ | ಶಾ | ಲೆ | ಥಾ | ಡು | ಢು | ಚಂ | ಲ | ಗ | ಅ |
| ಕ | ಹ | ಳ | ಇ | ಓ | ರು | ಲೋ | ಲೇ | ಈ | ನೇ |
| ಶ | ರೇ | ಪು | ತೋ | ಷೆ | ಷಿ | ಕೋ | ರು | ಮು | ಗೇ |
| ಷ | ಆ | ರೈ | ಲು | ಲು | ಲೈ | ಚೂ | ತಿ | ಋ | ಫ |
| ನೆ | ಜೆ | ರ | ಮ | ನೋ | ಷಿ | ನು | ಧುಂ | ಬೋ | ಆ |
| ಮ | ರೇ | ಖ | ಏ | ಉ | ದ್ದ | ದಾ | ಸೇ | ದೀ | ನೆ |

- ಈ ಶಬ್ದಗಳನ್ನು ಸ್ಲೇಟಿನ ಮೇಲೆ ಬರೆಯಿರಿ.
- ಮೇಲಿನಷ್ಟೇ ಅಲ್ಲದೆ ನೀವು ಮತ್ತೆ ಯಾವ ಯಾವ ಶಬ್ದಗಳನ್ನು ರಚಿಸಲು ಸಾಧ್ಯವಿದೆ ಅವನ್ನೂ ಸ್ಲೇಟಿನ ಮೇಲೆ ಬರೆಯಿರಿ.
- ಅಕ್ಷರ ಕಾರ್ಡುಗಳನ್ನು ಸಂಗ್ರಹಿಸಿ ಇಂತಹ ಮತ್ತಷ್ಟು ಶಬ್ದಗಳನ್ನು ರಚಿಸಿರಿ.

# ನಿಮ್ಮ ಬಗ್ಗೆ ಹೇಳಿರಿ.

1. ನನ್ನ ತಾಯಿಯ ಹೆಸರು ........................

2. ನನ್ನ ತಂದೆಯ ಹೆಸರು ......................

3. ನಾವು ...................... ಯಲ್ಲಿ ವಾಸಿಸುತ್ತೇವೆ.

4. ನಮ್ಮ ಜಿಲ್ಲೆಯ ಹೆಸರು ...............

5. ನಮ್ಮ ಮನೆಯಲ್ಲಿ ಒಟ್ಟು ............ ಜನರಿದ್ದೇವೆ.

6. ನನಗೆ ......... ವರ್ಷ.

7. ನನ್ನ ಮನೆಗೆ ಒಟ್ಟು ............... ಬಾಗಿಲುಗಳಿವೆ.

8. ನನ್ನ ಮಾವನು ................... ರಲ್ಲಿ ವಾಸಿಸುತ್ತಾನೆ.

9. ನನ್ನ ಮನೆಯ ಹತ್ತಿರ .............. ಇದ್ದಾರೆ.

● ನಿಮ್ಮ ಮನೆಯ ಮತ್ತು ಮನೆ ಮಂದಿಯ ಚಿತ್ರ ಬರೆಯಿರಿ. ಸ್ಲೇಟಿನ ಮೇಲೆ ಮತ್ತು ಕೊಡಲಾದ ಹಾಳೆಯ ಮೇಲೆ ಬರೆಯಿರಿ.

# ಕೂಡಿಸಿ ಬರೆಯಿರಿ

ಕಪ್ಪು ಗೋಲಿ ●

ಬಿಳಿ ಗೋಲಿ ○

1. ●●● ○○○ 3 + 3 = 6
2. ● ○○○ ○○○ 1 + 6 = 7
3. ●●●●●●●○○○ ..... + ..... = .......
4. ●●○○○○ ...... + ....... = ......
5. ●●●○○○○○ ....... + ...... = ......

ಕೂಡಿರಿ ಮತ್ತು ಸಂಖ್ಯೆಗಳಿಗೆ ಸರಿಯಾಗಿ ಕಪ್ಪು ಮತ್ತು ಬಿಳಿ ಗೋಲಿಗಳನ್ನು ಬರೆಯಿರಿ.

4 + 3 = 7 ●●●●○○○

3 + 2 = 5 ●●●○○

6 + 3 =

5 + 3 =

4 + 4 =

ಬಿಟ್ಟ ಸ್ಥಳ ತುಂಬಿರಿ.

| | | | |
|---|---|---|---|
| ●●●● | + ............ | 4 + 5 | = 9 |
| ●●●●●● | + ............ | 6 + ...... | = 9 |
| .................... | + ○○ | .....+ 2 | = 9 |
| ................... | + ○ | .....+ 1 | = 9 |

# ಒಂದಿಲ್ಲೊಂದು ಸುದ್ದಿ






ದಿಲ್ಲಿಯಿಂದ ಬಂದಿತು ಸುದ್ದಿ
ರಾಣಿ ನೊಣ ತಂದಿತು ಸುದ್ದಿ
ಮಿಡತೆಯ ಹೊಡೆತ ತಿಂದ ಆನೆ
ಸೇರಿತು ಪಾಪ ಮಡಕೆಯ ಕೊನೆ
ಮಾಡುವುದೇನು? ಹೇಳಿ ನೀವೆ
ಮಡಕೆಲಿ ಬಿದ್ದ ಆನೆಗೆ ಅಚ್ಚರಿ
ಯಾಕದು ಗೊತ್ತೆ ಈ ಕಿರಿಕಿರಿ
ಬಿದ್ದಿದೆ ಕೋತಿ ಮಡಕೆಯ ತಳವಾ ಸೇರಿ
ಅಳುತ್ತಿತ್ತು ಅಪತ್ತಿಗೆ ಸಿಕ್ಕ ಆನೆ








ಸೋರುತ್ತಿತ್ತು ಕಣ್ಣೀರ ಸೋನೆ
ತಡೆಯುವುದೇಗೆ ಈ ಬೇನೆ
ನಿಲ್ಲಲೆ ಇಲ್ಲ ಕಣ್ಣಿನ ನೀರು
ಮಡಕೆಯ ತುಂಬಿತು ಉಪ್ಪಿನ ನೀರು
ಮುಳುಗುತ್ತಿತ್ತು ಆನೆ ಕೋತಿ ಆಗದೆ ಪಾರು
ಸದ್ದನು ಕೇಳಿ ಬಂದಿತು ಸೊಳ್ಳೆ
ಮಡಕೆಗೆ ಹೊಡೆಯಲು ಮೂಗಿನ ಹೊಳ್ಳೆ
ಹರಿಯಿತು ಆಚೆ ನೀರಿನ ಹೊಳೆ
ಪಾರಾದವು ಆನೆ ಕೋತಿ ಆಪತ್ತಿನಿಂದ
ಕೂಡಿ ಕುಣಿದವು ಬಲು ಸಂತಸದಿಂದ

# ಜೊತೆಗಳನ್ನು ಹುಡುಕಿರಿ

ಪ್ರತಿಯೊಂದು ಸಾಲಿನಲ್ಲಿ ಮೊದಲ ಚಿತ್ರದಂತಹ ಚಿತ್ರ ಒಂದೇ ಒಂದು ಇರುತ್ತದೆ. ಅದನ್ನು ಗುರುತಿಸಿ. ಅದರಲ್ಲಿ ಹಳದಿ ಬಣ್ಣ ತುಂಬಿರಿ.




# ಹತ್ತು ಮತ್ತು ಬಿಡಿ

| ಒಂದು ಗೊಂಚಲು ಹತ್ತು ದ್ರಾಕ್ಷಿ |


| ಒಂದು ಹತ್ತು ಹತ್ತು ಬಿಡಿಗಳು |



 = 


ಒಂದು ದ್ರಾಕ್ಷಿ ಒಂದು ಗೊಂಚಲು ಹತ್ತು ದ್ರಾಕ್ಷಿಗಳು



 =

ಎರಡು ಗೊಂಚಲು = ..... ದ್ರಾಕ್ಷಿಗಳು ಮೂರು ಗೊಂಚಲು = ...... ದ್ರಾಕ್ಷಿಗಳು





ಮೂರು ಗೊಂಚಲು 5 ದ್ರಾಕ್ಷಿಗಳು 35 ದ್ರಾಕ್ಷಿಗಳು





18 ದ್ರಾಕ್ಷಿಗಳು ಗೊಂಚಲು ಮತ್ತು ದ್ರಾಕ್ಷಿಗಳು

25 ದ್ರಾಕ್ಷಿಗಳು

14 ದ್ರಾಕ್ಷಿಗಳು

36 ದ್ರಾಕ್ಷಿಗಳು

| | |
|---|---|
| 1 ಗೊಂಚಲು | 10 ದ್ರಾಕ್ಷಿಗಳು |
| 2 ಗೊಂಚಲು | ........ ದ್ರಾಕ್ಷಿಗಳು |
| 3. ಗೊಂಚಲು | ....... ದ್ರಾಕ್ಷಿಗಳು |
| 4 ಗೊಂಚಲು | ....... ದ್ರಾಕ್ಷಿಗಳು |
| 5 ಗೊಂಚಲು | ....... ದ್ರಾಕ್ಷಿಗಳು |
| 6 ಗೊಂಚಲು | ....... ದ್ರಾಕ್ಷಿಗಳು |
| 7 ಗೊಂಚಲು | ....... ದ್ರಾಕ್ಷಿಗಳು |
| 8 ಗೊಂಚಲು | ........ ದ್ರಾಕ್ಷಿಗಳು |

ಸ್ಲೇಟಿನ ಮೇಲೆ ಇಂತಹ ಮತ್ತಷ್ಟು ಉದಾಹರಣೆಗಳನ್ನು ಅಭ್ಯಾಸ ಮಾಡಿಸಿ. ದ್ರಾಕ್ಷಿಯ ಬದಲಾಗಿ ಕಲ್ಲುಗಳನ್ನು ತೆಗೆದುಕೊಳ್ಳಿರಿ. ಗೊಂಚಲಿನ ಬದಲು 10 ಕಲ್ಲುಗಳ ಒಂದು ರಾಶಿಯನ್ನು ಮಾಡಿರಿ. ಇವೆರಡರ ಸಹಾಯದಿಂದ ಇದೇ ರೀತಿ ಅಭ್ಯಾಸ ಮಾಡಿರಿ.

# ಕೋಷ್ಟಕ ತುಂಬಿರಿ

ರಾಜು, ಹಸು, ಶೀಸೆ, ಕಮಲ, ಇಲಿ, ಮೇಕೆ, ಅಂಗಿ, ನಡೆ, ತರಕಾರಿ, ಜೇಕಬ್, ಮಹಮ್ಮದ್ರು, ಚಾಕು, ಹುಲಿ, ನರಿ, ಮೊಲ, ಒತೆ, ಬಾರಿಸು, ಇದೆ, ತಿನ್ನು ನೋಡು, ಜೇಡ, ಈಜು.


ಈ ಮೇಲಿನ ಶಬ್ದಗಳನ್ನು ಕೆಳಗಿನ ಗುಂಪಿನಲ್ಲಿ ಹುಡುಕಿರಿ. ಮತ್ತು ಅವಕ್ಕೆ ದುಂಡು ಸುತ್ತಿರಿ.

| ಪ್ರಾಣಿಗಳು | ವಸ್ತುಗಳು | ಹೆಸರು |
|---|---|---|
| ಹಸು | ಶೀಸೆ | ರಾಜ |
| | | |

| | | | | | | | | | |
|---|---|---|---|---|---|---|---|---|---|
| ಕ | ಟ | ತ | ಪ | ರಾ | ಜ | ಚ | ಛ | ಜ | ಝ |
| ಹ | ಸು | ತೋ | ರು | ಮೊ | ಗ | ನೋ | ಡು | ಬು | ಸೆ |
| ಯ | ಕ್ಕಿ | ಕ | ಮ | ಲ | ಳಾ | ಧ | ಬ | ರು | ಶಿ |
| ಮೇ | ದಾ | ನಾ | ನ | ರಿ | ಡು | ಇ | ಲಿ | ಸಿಂ | ಹ |
| ಕೆ | ನ್ತೈ | ರಿ | ಅಂ | ಗಿ | ಕ್ಷ | ಕೊ | ಡೆ | ಹೇ | ರ |
| ರಿ | ಮ | ಣ | ಕಿ | ಈ | ಜು | ಳ್ಳು | ನ | ದು | ಳು |
| ಕ್ಷಿ | ತ್ತ | ಜೇ | ಡ | ಮ | ಹ | ಮ್ಮ | ದ | ತ | ಅ |
| ಜಾ | ಗಿ | ಕ | ರ | ಗ | ಸ | ರ | ಳ | ರ | ಲ |
| ಕು | ರು | ಬ | ಟು | ಹು | ಲಿ | ರ್ಚಿ | ವ | ಕಾ | ಣು |
| ರಿ | ಹು | ಕ್ಕೆ | ಚಿ | ಕೀ | ಲೋ | ಕು | ಬ್ರ | ರಿ | ಕೇ |

# ಭಾಗಗಳು

ಪ್ರತಿಯೊಂದು ಸಾಲಿನಲ್ಲಿ ಕೊಟ್ಟ ಭಾಗಗಳನ್ನು ಜೋಡಿಸಿ ಪೂರ್ಣ ಚಿತ್ರ ರಚಿಸಿರಿ. ಮತ್ತು ಅದರ ಹೆಸರು ಬರೆಯಿರಿ.



# ಮೋಚಿ ಇರುವೆ

ಒಂದು ಇರುವೆ ಇತ್ತು. ಅದು ಎರಡು ಬೂಟುಗಳನ್ನು ತಯಾರಿಸಿಕೊಂಡು ಮಾರಲು ಹೊರಟಿತು. ಅದಕ್ಕೊಂತು ಕೋತಿ ಕಾಣಿಸಿತು. ಇರುವೆ "ಕೋತಿ ಮಾವ, ಕೋತಿ ಮಾವ, ಸ್ವಲ್ಪ ನಿಲ್ಲು" ಎಂದು ಕೂಗಿತು. ಓಡುತ್ತಾ ಕೋತಿಯ ಹತ್ತಿರ ಹೋಗಿ "ಕೋತಿ ಮಾವ, ಕೋತಿ ಮಾವ, ನನ್ನ ಬೂಟುಗಳನ್ನು ತೆಗೆದುಕೋ" ಎಂದು ಹೇಳಿತು. ಕೋತಿಯು ಬೂಟುಗಳನ್ನು ನೋಡಿತು. ಅನಂತರ ಇರುವೆ ಕಡೆಗೆ ನೋಡಿತು. ಅದನ್ನು ಮೇಲಿನಿಂದ ಕೆಳಗಿನವರೆಗೆ ದಿಟ್ಟಿಸಿ ನೋಡಿತು. ಅನಂತರ ಹೇಳಿತು. "ಇವು ಬಹಳ ಚಿಕ್ಕವು. ಇವುಗಳನ್ನು ಮೊಲಕ್ಕೆ ಕೊಡು".

ಇರುವೆ ಓಡೋಡುತ್ತಾ ಮೊಲದ ಮನೆಗೆ ಹೋಯಿತು. ಮೊಲ ಹೇಳಿತು "ನಾನೇನೋ ಬೂಟುಗಳನ್ನು ತೆಗೆದುಕೊಳ್ಳುತ್ತಿದ್ದೆ. ನನಗೆ ನಾಲ್ಕು ಕಾಲುಗಳಿವೆ. ಆದರೆ ಬೂಟುಗಳು ಎರಡೇ ಇವೆಯಲ್ಲ".



ಇರುವೆ ಮನೆಗೆ ಹಿಂದಿರುಗಿತು. ರಾತ್ರಿಯೆಲ್ಲ ದುಡಿದು ಮತ್ತೆ ಎರಡು ಬೂಟುಗಳನ್ನು ತಯಾರಿಸಿತು. ಮರು ದಿನ ನಾಲ್ಕು ಬೂಟುಗಳನ್ನು ತೆಗೆದುಕೊಂಡು ಮೊಲದ ಮನೆಗೆ ಹೋಯಿತು. ಮೊಲ ಎಷ್ಟು ಪ್ರಯತ್ನಿಸಿದರೂ ಅದರ ಕಾಲುಗಳು ಬೂಟಿನೊಳಗೆ ಸೇರಲಿಲ್ಲ. ಅವು ಬಹಳ ಚಿಕ್ಕವಿದ್ದವು. ಆಗ ಮೊಲ "ಈ ಬೂಟುಗಳು ಬಹಳ ಚಿಕ್ಕವು. ಇರುವೆ ರಾಣಿ ಮಾತ್ರ ಇವುಗಳನ್ನು ತೆಗೆದುಕೊಳ್ಳಬಲ್ಲಳು" ಎಂದಿತು.



ಆಗ ಇರುವೆ, ಇರುವೆ ರಾಣಿಯ ಬಳಿ ಹೋಯಿತು. ರಾಣಿಯನ್ನು ಕೇಳಿತು. "ಇರುವೆ ರಾಣಿ, ಇರುವೆ ರಾಣಿ ನಾನು ನಿನಗಾಗಿ ಬೂಟು ತಯಾರಿಸಿ ತಂದಿದ್ದೇನೆ. ತೆಗೆದುಕೊಳ್ಳುವಿಯಾ?"



ಇರುವೆ ರಾಣಿ "ನನಗಿರುವುದು ಆರು ಕಾಲುಗಳು ನೀನು ತಂದಿರುವುದು. ನಾಲ್ಕು ಬೂಟುಗಳು, ಹೇಗೆ ತೆಗೆದುಕೊಳ್ಳಲಿ.

ಇರುವೆ ಮತ್ತೆ ಮನೆಗೆ ಮರಳಿತು. ರಾತ್ರಿಯೆಲ್ಲಾ ಕುಳಿತು ಮತ್ತೆರಡು ಬೂಟುಗಳನ್ನು ತಯಾರಿಸಿತು. ಮರು ದಿನ ಆರೂ ಬೂಟುಗಳನ್ನು ತೆಗೆದುಕೊಂಡು ಇರುವೆ ರಾಣಿಯ ಮನೆಗೆ ಹೋಯಿತು. ಇರುವೆ ರಾಣಿ ಬೂಟುಗಳನ್ನು ತೆಗೆದುಕೊಂಡು ತೊಟ್ಟುಕೊಂಡು ನೋಡಿತು.



"ಈ ಬೂಟುಗಳು ತುಂಬಾ ಮೆತ್ತಗಿವೆ. ನಾನು ಇವುಗಳನ್ನು ಮೆಟ್ಟಿಕೊಂಡು ಮಣ್ಣಿನಲ್ಲಿ ನಡೆದರೆ ಹರಿದು ಹೋದಾವು. ಇವು ಜೇಡನಿಗೆ ಮಾತ್ರ ಸರಿ ಹೊಂದಬಹುದು" ಎಂದಿತು.

ಪಾಪ! ಇರುವೆ ಬೆನ್ನು ಬಾಗಿಸಿ ಕಾಲೆಳೆಯುತ್ತ ಜೇಡನ ಮನೆ ತಲುಪಿತು. ಆದರೆ ಅದು ಮನೆ ಬಾಗಿಲ ಬಳಿಯೇ ನಿಂತು ಬಿಟ್ಟಿತು. ಯಾಕೆಂದರೆ ಮನೆಯೊಳಗೆ ಹೋದರೆ ಬಲೆಯಲ್ಲಿ ಸಿಕ್ಕಿ ಬೀಳುತ್ತಿತ್ತು. ಜೇಡ ಹೊರಬಂದು "ಏನು ಸಮಾಚಾರ? ತುಂಬಾ ಚಿಂತೆಯಲ್ಲಿರುವಂತೆ ಕಾಣುವಿ" ಎಂದು ಕೇಳಿತು.

ಆಗ ಇರುವೆ "ನಿಜ ನನಗೆ ತುಂಬಾ ಚಿಂತೆಯಾಗಿದೆ. ಯಾರೂ ನಾನು ತಯಾರಿಸಿದ ಬೂಟುಗಳನ್ನು ತೆಗೆದುಕೊಳ್ಳುತ್ತಿಲ್ಲ. ಒಬ್ಬರು ಒಂದು ಹೇಳಿದರೆ, ಇನ್ನೊಬ್ಬರು ಇನ್ನೊಂದು ಹೇಳುತ್ತಾರೆ".




ಜೇಡಕ್ಕನಿಗೆ ಇರುವೆಯ ಮೇಲೆ ಕನಿಕರ ಉಂಟಾಯಿತು. ಆಗ ಅದು ಇರುವೆಗೆ "ನಾನು ಪ್ರತಿದಿನವೂ ಎರಡು ಬೂಟುಗಳನ್ನು ಕೊಂಡುಕೊಳ್ಳುವಂತಹ ಗಿರಾಕಿಯನ್ನು ಹುಡುಕಿ ಕೊಡುತ್ತೇನೆ" ಎಂದು ಹೇಳಿತು.

ಇರುವೆಗೆ ತುಂಬಾ ಸಂತೋಷವಾಯಿತು. "ಅಂಥ ಗಿರಾಕಿ ಯಾರು? ಬೇಗ ಹೇಳು, ಬೇಗ ಹೇಳು?" ಎಂದು ಅವಸರಿಸಿತು.

ಜೇಡ ಹೇಳಿತು "ಕಂಬಳಿ ಹುಳು. ಅದಕ್ಕೆ ಸಾಕಷ್ಟು ಕಾಲುಗಳಿವೆ.

ಆದ್ದರಿಂದ ಅದು ನಿನ್ನ ಎಲ್ಲ ಬೂಟುಗಳನ್ನು ತೆಗೆದುಕೊಳ್ಳುತ್ತದೆ" ಜೇಡ ಹೇಳಿತು.

ಅಂದಿನಿಂದ ಇರುವೆ ಪ್ರತಿ ದಿನ ಎರಡೆರಡು ಬೂಟುಗಳನ್ನು ತಯಾರಿಸಿ ಕುಬಳಿ ಹುಳುವಿಗೆ ಕೊಡುತ್ತಾ ಬಂದಿತು.



- ಈ ಕಥೆಯನ್ನು ನಮ್ಮ ಶಬ್ದಗಳಲ್ಲಿ ಇನ್ನೊಬ್ಬರಿಗೆ ಹೇಳಿರಿ.
- ಕೋಷ್ಟಕ ತುಂಬಿರಿ.

| ಹೆಸರು | ಕಾಲುಗಳು |
|---|---|
| ಪಕ್ಕಿಗಳು | 2 |
| ಮೊಲ | |
| ಇರುವೆ | |
| ಜೇಡ | |

ಇರುವೆ ಯಾರ್ಯಾರ ಬಳಿ ಹೋಯಿತು? ಯಾವ ಕ್ರಮದಲ್ಲಿ ಎಂಬುದನ್ನು ಕೆಳಗಿನವುಗಳಲ್ಲಿ ಆಯ್ಕೆ ಮಾಡಿರಿ.


- ಹಕ್ಕಿ, ಇರುವೆ ರಾಣಿ, ಮೊಲ, ಕೋತಿ.
- ಜೇಡ, ಮೊಲ, ಇರುವೆ, ಕೋತಿ.
- ಕೋತಿ, ಮೊಲ, ಇರುವೆ ರಾಣಿ, ಜೇಡ.

- ಮೊಲಕ್ಕಿರುವಷ್ಟು ಕಾಲುಗಳು ಮತ್ತೆ ಯಾವ ಯಾವ ಪ್ರಾಣಿಗಳಿರುತ್ತವೆ?
- ಇರುವೆಗಿರುವಷ್ಟು ಕಾಲುಗಳು ಯಾವ ಯಾವ ಜೀವಿಗಳಿರುತ್ತವೆ?
- ಇರುವೆ ಪ್ರತಿ ರಾತ್ರಿ ಎರಡು ಬೂಟುಗಳನ್ನು ತಯಾರಿಸುತ್ತವೆ. ಅದು ತಯಾರಿಸಿದ ಬೂಟುಗಳ ಸಂಖ್ಯೆ.

| ಒಂದು ರಾತ್ರಿಯಲ್ಲಿ | ಎರಡು ರಾತ್ರಿಯಲ್ಲಿ | ಮೂರು ರಾತ್ರಿಯಲ್ಲಿ | ನಾಲ್ಕು ರಾತ್ರಿಯಲ್ಲಿ | ಐದು ರಾತ್ರಿಯಲ್ಲಿ | ಆರು ರಾತ್ರಿಯಲ್ಲಿ | ಏಳು ರಾತ್ರಿಯಲ್ಲಿ | ಎಂಟು ರಾತ್ರಿಯಲ್ಲಿ | ಒಂಭತ್ತು ರಾತ್ರಿಯಲ್ಲಿ | ಹತ್ತು ರಾತ್ರಿಯಲ್ಲಿ |
|---|---|---|---|---|---|---|---|---|---|
| 1x2 | 2x2 | 3x2 | 4x2 | 5x2 | 6x3 | 7x2 | 8x2 | 9x2 | 10x2 |
| 2 | | 6 | | | 12 | | 16 | 18 | 20 |


# ಒಂದು - ಅರ್ಧ - ಕಾಲು






ಚಿತ್ರ 1ರಲ್ಲಿ ತೋರಿಸಿದಂತಹ ಕಾಗದ ತೆಗೆದುಕೊಳ್ಳಿರಿ. ಅದನ್ನು ಮಧ್ಯದಲ್ಲಿ ಮಡಚಿ ಚೆನ್ನಾಗಿ ಗೀರಿರಿ. ಅದು ಚಿತ್ರ 2ರಲ್ಲಿ ತೋರಿಸಿದಂತೆ ತ್ರಿಕೋನಾಕಾರ ತಾಳುತ್ತದೆ.

ತ್ರಿಕೋನಾಕಾರದಲ್ಲಿ ಮಡಿಚಿದ ಕಾಗದವನ್ನು ಇನ್ನೊಂದು ಬಾರಿ ಮಡಿಚಿರಿ. ಚಿತ್ರ 3ನ್ನು ನೋಡಿರಿ. ಈಗ ಮಡಿಕೆಗಳನ್ನು ಬಿಚ್ಚಿ.







ಇಡೀ ಕಾಗದವನ್ನು ತೆರೆದಿಡಿ. ಮಡಿಕೆಯಿದ್ದ ಗೆರೆಯ ಉದ್ದಕ್ಕೂ ಕಾಗದವನ್ನು ಹರಿದು ಬೇರೆ ಬೇರೆ ಮಾಡಿರಿ. ಎಷ್ಟು ಬಾಗಗಳಾದವು? ಎಣಿಕೆ ಮಾಡಿರಿ.

ಕಾಗದದ ಪ್ರತಿಯೊಂದು ಭಾಗವನ್ನು ಜೋಡಿಸಿ. ಇನ್ನೊಂದು ಕಾಗದದ ಮೇಲಿಟ್ಟು ನೋಡಿರಿ.

ಇನ್ನೊಂದು ಕಾಗದವನ್ನು ತೆಗೆದುಕೊಳ್ಳಿರಿ. ಅದನ್ನು ಚಿತ್ರ 6ರಲ್ಲಿ ತೋರಿಸಿದಂತೆ ಮಡಿಚಿರಿ.






ಚಿತ್ರ 7ರಲ್ಲಿ ತೋರಿಸಿದಂತೆ ಅದನ್ನು ಇನ್ನೊಂದು ಸಲ ಮಡಿಚಿರಿ.

ಕಾಗದವನ್ನು ಬಿಚ್ಚಿ ಮಡಿಚಿದ ಭಾಗಗಳನ್ನು ಹರಿದು ಪ್ರತ್ಯೇಕಿಸಿರಿ.

ಈ ತುಂಡುಗಳನ್ನು ಇನ್ನೊಂದು ಕಾಗದದ ಮೇಲಿಟ್ಟು ಜೋಡಿಸಿರಿ.






ಒಂದು ಪೂರ್ಣ ತುಂಡಿನಲ್ಲಿ ಎಷ್ಟು ಕಾಲು ಭಾಗಗಳಾಗುತ್ತವೆ?

ಕಾಗದದ ಅರ್ಧ ತುಂಡಿನಲ್ಲಿ ಎಷ್ಟು ಕಾಲು ಭಾಗಗಳಾಗುತ್ತವೆ?

ಅರ್ಧ ಭಾಗ ದೊಡ್ಡದೆ? ಅಥವಾ ಕಾಲು ಭಾಗ ದೊಡ್ಡದೆ?

ಒಂದು–ಅರ್ಧ–ಕಾಲು

# ಅಂಕಿಯ ಆಟ




- ಸಂಖ್ಯಾ ಕೋಷ್ಟಕವಿರುವ ಪಾಠವನ್ನು ಅಭ್ಯಾಸ ಮಾಡಿರಿ.
- ದಾಳದ ಆಟ ಆಡಿರಿ.

ಇಬ್ಬರು ಮಕ್ಕಳು ಈ ಆಟವನ್ನು ಆಡಬಹುದು. ಅವರು ಬೇರೆ ಬೇರೆ ಬಣ್ಣದ ಎರಡು ಗೋಲಿಗಳನ್ನು ತೆಗೆದುಕೊಂಡು 1ನೆಯ ಮನೆಯಲ್ಲಿಡಬೇಕು. ಸರತಿಯಂತೆ ದಾಳ ಹಾಕಬೇಕು. ದಾಳ ಎಷ್ಟು ಬೀಳುವುದು, ಅಷ್ಟು ಮನೆ ಮುಂದೆ ಹೋಗಬೇಕು. ಯಾರು 50ನ್ನು ಮೊದಲು ತಲುಪುವರೋ ಅವರು ಗೆದ್ದಂತೆ.

# ಯಾವುದು ಮುಳುಗಿತು? ಯಾವುದು ತೇಲಿತು?




|  ನೀರಿನ ಮೇಲೆ ತೇಲುತ್ತದೆ | ನೀರಿನಲ್ಲಿ ಮುಳುಗುತ್ತದೆ  |
|---|---|
| | |
| | |
| | |
| | |
| | |
| | |
| | |
| | |
| | |


- ತೇಲುವ ವಸ್ತು ಮತ್ತು ಮುಳುಗುವ ವಸ್ತುಗಳನ್ನು ಚಿತ್ರ ಕಾರ್ಡುಗಳಿಂದ ಹುಡುಕಿ ತೆಗೆಯಿರಿ.
- ಬಕೆಟ್‌ನಲ್ಲಿ ನೀರು ತೆಗೆದುಕೊಂಡು ಅದರಲ್ಲಿ ಸುತ್ತ ಮುತ್ತಲಿರುವ ವಸ್ತುಗಳನ್ನು ಹಾಕಿ ನೋಡಿರಿ.
- ಯಾವುದು ಮುಳುಗಿತು? ಯಾವುದು ತೇಲಿತು?


# ಟಾಂಗಾವಾಲನಾದ ಮಲ್ಲು

ಕಟ್, ಕಟ್, ಪಟ್, ಪಟರ್! ಎಂದು ಜಟಕಾದ ಗಾಲಿಯು
ಹೊಸ ಹೊಸ ಬಗೆಯ ಶಬ್ಧಗಳನ್ನು ಹೊರಡಿಸುತ್ತಿತ್ತು
ಮಲ್ಲು ಗಾಲಿಯಲ್ಲಿ ಬೆತ್ತ ಸಿಕ್ಕಿಸುತ್ತ ಜಟಕಾದ ಜತೆ
ಖುಷಿಯಿಂದ ಓಡುತ್ತಿದ್ದ




ಒಮ್ಮಿಂದೊಮ್ಮೆಲೆ ಜಟಕಾದ ವೇಗ ಕಡಿಮೆ
ಯಾಯಿತು, ನಿಧಾನವಾಗಿ ನಿಂತು ಬಿಟ್ಟಿತು.
ಮಲ್ಲು ನೆಗೆದು ಜಟಕಾದ ಹಿಂಬದಿಯಲ್ಲಿ ಕುಳಿತುಕೊಂಡ.
ಮಲ್ಲು ಖುಷಿಯಿಂದ ಕುಳಿತಿದ್ದ, ಜಟಕಾವಾಲ
ನಿಗೆ ಮಲ್ಲು ಕಾಣುತ್ತಿದ್ದಿಲ್ಲ






ಮಲ್ಲು ಆರಾಮದಿಂದ ಕುಳಿತುಕೊಂಡು
ಜಟಕಾ ಹೊರಡುವ ದಾರಿ ಕಾಯುತ್ತಿದ್ದ
ಜಟಕಾದ ಛತ್ತಿನ ಮೇಲೆ ಯಾರೋ ಹಿಂದುಗಡೆ
ಬರುತ್ತಿರುವಂತೆ ಮಲ್ಲುನಿಗೆ ಭಾಸವಾಯಿತು.


ಮಲ್ಲು ತಟ್ಟನೆ ಜಟಕಾದ ಕೆಳಗಡೆ ಸೇರಿಕೊಂಡ
ನಿಧಾನವಾಗಿ ಆತ ಜರುಗುತ್ತ ಜಟಕಾದ ಕೆಳಗಿನಿಂದ
ಜಟಕಾ ನಡೆಸುವವನ ಜಾಗ ತಲುಪಿ ಮೇಲೇರಿ
ಕುಳಿತುಕೊಂಡ



ಕುಳಿತುಕೊಳ್ಳುತ್ತಲೇ ಕುದುರೆಯ
ಲಗಾಮನ್ನು ಕೈಯಲ್ಲಿ ತೆಗೆದುಕೊಂಡು,
ಚಾಟಿಯಿಂದ ಅದಕ್ಕೊಂದೇಟು
ಬಾರಿಸಿದ, ಜಟಕಾ ವೇಗವಾಗಿ ಓಡಲಾರಂಭಿಸಿತು.




ಜಟಕಾವಾಲಾ ಅಲ್ಲಿಯೇ ನಿಂತು ಕೂಗುತ್ತಿದ್ದ
ಕಟ್ ಕಟ್, ಪಟ್ ಪಟ್ ಜಟಕಾ ಚಾಟಿ
ಆರಾಮ ಲಗಾಮು



- ಜಟಕಾ ಏಕೆ ನಿಂತುಕೊಂಡಿತು?
- ಟಾಂಗಾವಾಲ ಹಿಂದುಗಡೆ ಏಕೆ ಹೋದ?
- ಮಲ್ಲು ಟಾಂಗಾದ ಕೆಳಗಡೆ ಏಕೆ ಸೇರಿಕೊಂಡ?
- ಟಾಂಗಾ ಹೋದ ಬಳಿಕ ಟಾಂಗಾವಾಲಾ ಏನು ಮಾಡಿರಬಹುದು?
- ಮಲ್ಲು, ಟಾಂಗಾ ತೆಗೆದುಕೊಂಡು ಏನು ಮಾಡುತ್ತಾನೆ?

# ಕೂಡಿರಿ, ಕಳೆಯಿರಿ ಮತ್ತು ಬಣ್ಣ ಹಾಕಿರಿ


ಎಲ್ಲಿ ಉತ್ತರ 2 ಬರುವುದೋ ಅದಕ್ಕೆ ಕೆಂಪು ಬಣ್ಣ ತುಂಬಿರಿ. 4 ಉತ್ತರ ಬಂದಲ್ಲಿ ಹಸಿರು ಬಣ್ಣ ತುಂಬಿರಿ. 5 ಉತ್ತರ ಬಂದಲ್ಲಿ ಹಳದಿ ಮತ್ತು 6 ಉತ್ತರ ಬಂದಲ್ಲಿ ನೀಲಿ ಬಣ್ಣ ತುಂಬಿರಿ.





ಇಂತಹ ಮತ್ತಷ್ಟು ಸಮಸ್ಯೆಗಳನ್ನು ಸ್ಲೇಟಿನ ಮೇಲೆ ಬಿಡಿಸಿರಿ.

# ಮಿನುಗುವ ಚುಕ್ಕಿ, ಹಾರುವ ಹಕ್ಕಿ

ಗೆರೆಯ ಉದ್ದಕ್ಕೂ ನಡೆಯುತ್ತ ಖಾಲಿ ಮನೆಯನ್ನು ಹುಡುಕಿರಿ. ಮತ್ತು ಅದರಲ್ಲಿ ಕೆಳಗೆ ಕೊಟ್ಟಂತಹ ಚಿತ್ರ ಬಿಡಿಸಿರಿ.




# ಇಲಿಗಳು



ಸಂಪಿಗೆಹಳ್ಳಿಯ ಬಳಿಯಲ್ಲಿ
ಕೆಂಪೇಗೌಡನ ಹೊಲವಿತ್ತು
ಹೊಲದ ಬದಿಯ ಬಿಲದಲ್ಲಿ
ಇಲಿಗಳ ಹಿಂಡು ನೆಲೆಸಿತ್ತು

ಹದವನು ನೋಡಿ ನೇಗಿಲ ಹೂಡಿ
ಉತ್ತನು ಹೊಲವ ಕೆಂಪೇಗೌಡ
ಕಡಲೆಯ ಬೀಜವ ಬಿತ್ತಿದನು
ಬುತ್ತಿಯ ತಿಂದು ಹೊತ್ತಾದ ಮೇಲೆ ಮರಳಿದನು



ಕತ್ತಲು ಕವಿದ ಇರುಳಲ್ಲಿ
ಬಗೆದವು ಹೊಲದ ನೆಲವನ್ನು
ಬಂದವು ಇಲಿಗಳು ಹಿಂಡಲ್ಲಿ
ತಿಂದವು ಕಡಲೆಯ ಬೀಜವನು

ಇಲಿಗಳ ಹೊಟ್ಟೆ ತುಂಬಿತ್ತು
ಇನ್ನೂ ಕತ್ತಲು ಕವಿದಿತ್ತು
ಮಂಪರು ನಿದ್ದೆಯು ಬಂದಿತ್ತು
ಇಲಿಗಳ ಹಿಂಡು ಮಲಗಿತ್ತು

**ಮಾದರಿಯಂತೆ ಪ್ರಾಸ ಪದಗಳನ್ನು ಬರೆಯಿರಿ.**


| | |
|---|---|
| ಹೊಲವಿತ್ತು– ನೆಲೆಸಿತ್ತು | ಕತ್ತಲೆ– |
| ಬಿತ್ತಿದನು–ಮರಳಿದನು | ಕಡಲೆ– |
| ಇರುಳಲ್ಲಿ–ಹಿಂಡಲ್ಲಿ | ನಿದ್ದೆ– |
| ಬಂದವು–ಬಗೆದವು | ಹೊಟ್ಟೆ– |
| ತುಂಬಿತ್ತು–ಕವಿದಿತ್ತು | ಸಂಪಿಗೆ– |
| ತಿಂದಿತ್ತು–ಮಲಗಿತ್ತು | |



# ಭಾಗಾಕಾರ (÷)


ಕಲ್ಲುಗಳು, ಬೀಜ ಅಥವಾ ಬಳೆಚೂರುಗಳನ್ನು ಸಂಗ್ರಹಿಸಿರಿ. ಹದಿನೈದು ಕಲ್ಲುಗಳನ್ನು ಎಣಿಕೆ ಮಾಡಿ ತೆಗೆದುಕೊಳ್ಳಿರಿ. ಸ್ಲೇಟು ಅಥವಾ ನೆಲದ ಮೇಲೆ ಐದು ವೃತ್ತಗಳನ್ನು ರಚಿಸಿರಿ. ಸರತಿಯಂತೆ ಒಂದೊಂದು ಕಲ್ಲನ್ನು, ಒಂದೊಂದು ವೃತ್ತದಲ್ಲಿಡುತ್ತ ಹೋಗಿರಿ. ಹದಿನೈದು ಕಲ್ಲುಗಳು ಮುಗಿಯುವವರೆಗೆ ಇದೇ ಕ್ರಿಯೆಯನ್ನು ಪುನಃ ಪುನಃ ಮಾಡಿರಿ. ಹೀಗೆ ಹದಿನೈದು ಕಲ್ಲುಗಳನ್ನು ಐದು ಗುಂಪುಗಳಲ್ಲಿ ಹಂಚಿದ ಬಳಿಕ ಪ್ರತಿಯೊಂದು ಗುಂಪಿನಲ್ಲಿಯ ಕಲ್ಲುಗಳನ್ನು ಎಣಿಕೆ ಮಾಡಿರಿ. ವಿವಿಧ ಪ್ರಶ್ನೆಗಳನ್ನು ಪರಿಗಣಿಸಿ. ಇದೇ ರೀತಿಯ ಚಟುವಟಿಕೆಗಳನ್ನು ಮಾಡಿರಿ.

ಹದಿನೈದು ಉಂಡೆಗಳನ್ನು ಐದು ಜನ ಸಹೋದರರಲ್ಲಿ ಸಮನಾಗಿ ಹಂಚಿರಿ. ಪ್ರತಿಯೊಬ್ಬರಿಗೂ ಎಷ್ಟು ಉಂಡೆಗಳು ಬರುತ್ತವೆ?




$15 \div 5 =$

6 ಬಾಳೆ ಹಣ್ಣುಗಳನ್ನು ಎರಡು ಕೋತಿಗಳಲ್ಲಿ ಸಮನಾಗಿ ಹಂಚಿರಿ. ಪ್ರತಿಯೊಂದು ಕೋತಿಗೆ ಎಷ್ಟು ಹಣ್ಣುಗಳು ಬರುತ್ತವೆ?




$6 \div 2 =$


8 ಹೂಗಳನ್ನು 2 ಚಿಟ್ಟೆಗಳಲ್ಲಿ ಸಮನಾಗಿ ಹಂಚಿರಿ. ಪ್ರತಿಯೊಂದು ಚಿಟ್ಟೆಗೆ ಎಷ್ಟು ಹೂಗಳು ದೊರೆಯುತ್ತವೆ?



$8 \div 2 =$


ಹತ್ತು ಮಾವಿನ ಹಣ್ಣುಗಳನ್ನು ಇಬ್ಬರು ಹುಡುಗಿಯರಲ್ಲಿ ಸಮನಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಎಷ್ಟು ಬರುತ್ತವೆ?






# ಚೆನ್ನ ಚೆನ್ನಿ

ಪ್ರತಿಯೊಂದು ಕಾರ್ಡಿನ ಮೇಲೂ ಚಿತ್ರ ಮತ್ತು ಅದರ ಹೆಸರು ಬರೆದಿದೆ. ಪ್ರತಿ ಕಾರ್ಡಿಗೂ ಒಂದು ಸಂಖ್ಯೆ ಕೂಡಾ ಇದೆ. ಈ ಕಾರ್ಡುಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸಿ ಸಾಕಷ್ಟು ವಾಕ್ಯಗಳನ್ನು ಮಾಡಬಹುದು. ಮಾದರಿಗಾಗಿ ನಾನು ಒಂದು ವಾಕ್ಯವನ್ನು ರಚಿಸಿದ್ದೇನೆ. ಮುಂದಿನ ಸಾಲಿನಲ್ಲಿರುವ ಸಂಖ್ಯೆಗಳನ್ನು ನೋಡಿ ನಿಮ್ಮದೇ ಆದ ವಾಕ್ಯಗಳನ್ನು ರಚಿಸಿರಿ.








ಚೆನ್ನನು ಮಾವಿನ ಹಣ್ಣನ್ನು ತಿನ್ನುತ್ತಿದ್ದಾನೆ.

..................................................................

..................................................................

..................................................................





**ಕೆಳಗೆ ಕೊಟ್ಟ ಸಂಖ್ಯೆಗಳ ಚಿತ್ರ ಮತ್ತು ಪದ ಹುಡುಕಿ ಅವುಗಳಿಂದ ವಾಕ್ಯಗಳನ್ನು ರಚಿಸಿ, ಮುಂದಿನ ಖಾಲಿ ಪುಟದಲ್ಲಿ ಆ ವಾಕ್ಯಗಳನ್ನು ಬರೆಯಿರಿ.**

| | | | |
|---|---|---|---|
| 1 | 3 | 7 | 14 |
| 2 | 4 | 9 | 15 |
| 1 | 6 | | 14 |
| 2 | 5 | 8 | 15 |
| 1 | 4 | 9 | 14 |
| 2 | 5 | | 11 |
| 1 | 5 | | 10 |
| 2 | 5 | | 13 |

ವಾಕ್ಯಗಳನ್ನು ಬರೆಯಿರಿ.

# ದಿಕ್ಕು ತೋಚಿತು

ಅಜ್ಜಿ ಮುದ್ದಿನ ಅಜ್ಜಿ
ದಿಕ್ಕನು ತಿಳಿಸುವ ನಮ್ಮಜ್ಜಿ
ದಿಕ್ಕುಗಳೆಷ್ಟಿವೆ ಹೇಳಜ್ಜಿ
ಅವುಗಳ ಹೆಸರು ಹೇಳಜ್ಜಿ
ಸೂರ್ಯನು ಹುಟ್ಟುವ ಪೂರ್ವದಲ್ಲಿ
ಸೂರ್ಯನು ಮುಳುಗುವ ಪಶ್ಚಿಮದಲ್ಲಿ
ಉಳಿದವು ಎರಡೇ ದಿಕ್ಕುಗಳು
ಪೂರ್ವಕೆ ನಿಂತು ನೋಡಿದರೆ
ಉತ್ತರ ದಕ್ಷಿಣ ಎಡ ಬಲಕೆ
ಎಡಗೈ ಕಡೆಗೆ ಉತ್ತರ ದಿಕ್ಕು
ಬಲಗೈ ಕಡೆಗೆ ದಕ್ಷಿಣ ದಿಕ್ಕು
ತಿಳಿದೆಯ ಕಂದ ನಾಲ್ಕು ದಿಕ್ಕು





| | |
|---|---|
| ಅಜ್ಜ - ಅಜ್ಜಿ | ............... - ಭಾವ |
| ಚಿಕ್ಕಪ್ಪ - ................. | ............... - ಚಿಕ್ಕಮ್ಮ |
| ಮಾವ - ............... | ............... - ಅತ್ತೆ |

# ಬಿಡಿ ಹತ್ತು

ಒಂದು ಕಟ್ಟಿನಲ್ಲಿ ಹತ್ತು ಕಡ್ಡಿಗಳಿವೆ. ನೀವು ಎಣಿಕೆ ಮಾಡುವಾಗ ಯಾವಾಗ ಕಡ್ಡಿಗಳ ಸಂಖ್ಯೆ ಪತ್ತನ್ನು ತಲುಪುವುದೋ ಆಗ ಒಂದು ಕಟ್ಟನ್ನು ಕಟ್ಟಿರಿ. ಉಳಿದ ಕಡ್ಡಿಗಳನ್ನು ಮತ್ತೆ ಪ್ರತ್ಯೇಕವಾಗಿ ಎಣಿಕೆ ಮಾಡಿ ಕಟ್ಟು ಕಟ್ಟುವಾಗ ಪ್ರತಿ ಸಲವೂ ಎಷ್ಟು ಕಟ್ಟುಗಳಾದವು ಮತ್ತು ಎಷ್ಟು ಕಡ್ಡಿಗಳು ಉಳಿದವೆಂಬುದನ್ನು ತಿಳಿದುಕೊಳ್ಳಿರಿ.



ಮತ್ತು

........ ಕಡ್ಡಿ + .......... ಕಡ್ಡಿ



...... ಕಟ್ಟು + ..... ಕಡ್ಡಿ = ..... ಕಡ್ಡಿ




ಮತ್ತು

.... ಕಟ್ಟು .... ಕಡ್ಡಿ + .... ಕಡ್ಡಿ


...... ಕಟ್ಟು ... ಕಡ್ಡಿ = ..... ಕಡ್ಡಿ



2 ಕಟ್ಟು 4 ಕಡ್ಡಿ + 1 ಕಟ್ಟು 2 ಕಡ್ಡಿ =



...... ಕಟ್ಟು ... ಕಡ್ಡಿ



ಮತ್ತು

.... ಕಡ್ಡಿ + .... ಕಡ್ಡಿ =



...... ಕಟ್ಟು ... ಕಡ್ಡಿ

ಮತ್ತು



- ಇದೇ ರೀತಿಯ ಪ್ರಶ್ನೆಗಳನ್ನು ಸ್ಲೇಟಿನ ಮೇಲೆ ಬರೆಯಿರಿ.
- ಕಡ್ಡಿಗಳನ್ನು ತೆಗೆದುಕೊಂಡು ಕಟ್ಟು ಕಟ್ಟಿರಿ. ಇವುಗಳ ಸಹಾಯದಿಂದ ಇನ್ನಷ್ಟು ಪ್ರಶ್ನೆಗಳನ್ನು ರೂಪಿಸಿಕೊಳ್ಳಿರಿ. ಮತ್ತು ಚಟುವಟಿಕೆ ಮಾಡಿರಿ. ತಂಡಗಳನ್ನು ಮಾಡಿಕೊಂಡು ಒಬ್ಬರು ಮತ್ತೊಬ್ಬರೊಡನೆ ಪ್ರಶ್ನಿಸಿರಿ ಮತ್ತು ಉತ್ತರಿಸಿರಿ.

# ಎಡಬಿಡಂಗಿ ಮರ

ಒಂದು ಸಲ ಅಡವಿಯಲ್ಲಿ ವಿಚಿತ್ರವಾದ ಮರ ಹುಟ್ಟಿತು. ಅದರ ಹೂಗಳು ಕೆಂಪು, ಹಣ್ಣು ಹಳದಿ ಮತ್ತು ಎಲೆಗಳು ನೀಲಿಯಾಗಿದ್ದವು. ಅದರ ಪ್ರತಿಯೊಂದು ಹೂವಿನಲ್ಲಿ ಐದು ದಳಗಳಿದ್ದವು ಮತ್ತು ಫಲಗಳು ಎರಡೆರಡರ ಜೊತೆಯಾಗಿಯೇ ಹುಟ್ಟುತ್ತಿದ್ದವು. ಪ್ರತಿಯೊಂದು ಕೊಂಬೆಗೆ ಐದು ಜೊತೆ ಎಲೆಗಳಿರುತ್ತಿದ್ದವು. ಅಂದರೆ ಪ್ರತಿ ಕೊಂಬೆಗೆ ಹತ್ತು ಎಲೆಗಳು ಈ ಗಿಡದ ಚಿತ್ರವನ್ನು ಕೆಳಗೆ ಕೊಟ್ಟಿದೆ.

ಮೇಲಿನ ವರ್ಣನೆಗನುಗುಣವಾಗಿ ಗಿಡಕ್ಕೆ ಬಣ್ಣ ಹಾಕಿರಿ.



ಒಂದು ಹೂವಿನಲ್ಲಿ ....... ದಳಗಳಿವೆ 1x5=

 ಹೂಗಳಲ್ಲಿ ................. ದಳಗಳಿವೆ 2x5=

 ದಲ್ಲಿ .......... ದಳಗಳಿವೆ 4 x ... =

ಒಂದು ಕೊಂಬೆಯಲ್ಲಿ ........ ಎಲೆಗಳಿವೆ ..... x .... =

 ದಲ್ಲಿ .......... ಎಲೆಗಳಿವೆ ..... x ... = 20

ಒಂದು ಗೊಂಚಲಿನಲ್ಲಿ ....... ಹಣ್ಣುಗಳಿವೆ ..... x ...... =

**ಕೆಳಗಿನವುಗಳಿಗೆ ಉತ್ತರ ಹೇಳಿರಿ.**

ಐದು ಹೂಗಳಲ್ಲಿ ಎಷ್ಟು ದಳಗಳು? ....... x ....... =

ಮೂರು ಕೊಂಬೆಗಳಲ್ಲಿ ಎಷ್ಟು ಎಲೆಗಳು? ........ x ........ =

ಎಂಟು ಗೊಂಚಲಿನಲ್ಲಿ ಎಷ್ಟು ಹಣ್ಣುಗಳು? .......x ....... =

| 1 ಹೂ | 2 ಹೂ | 3 ಹೂ | 4 ಹೂ | 5 ಹೂ |
|---|---|---|---|---|
| 5 ದಳ | 10 ದಳ | 15 ದಳ | 20 ದಳ | 25 ದಳ |

| 6 ಹೂ | 7 ಹೂ | 8 ಹೂ | 9 ಹೂ | 10 ಹೂ |
|---|---|---|---|---|
| 30 ದಳ | 35 ದಳ | 40 ದಳ | 45 ದಳ | 50 ದಳ |

ಎಲೆ ಮತ್ತು ಕೊಂಬೆಗಳಿಗೆ ಸಂಬಂಧಿಸಿದಂತೆ ನೀವು ಇದೇ ತರಹದ ಕೋಷ್ಟಕಗಳನ್ನು ರಚಿಸಲು ಸಾಧ್ಯವೇ? ಗೊಂಚಲು ಮತ್ತು ಹಣ್ಣುಗಳಿಗೆ ಸಂಬಂಧಿಸಿದಂತಹ ಕೋಷ್ಟಕಗಳನ್ನು ಸ್ಲೇಟಿನ ಮೇಲೆ ರಚಿಸಿರಿ.

ಐದು ದಳಗಳಂತಿರುವ ಯಾವ ಯಾವ ಹೂಗಳು ನಿಮ್ಮೂರಿನಲ್ಲಿ ಬೆಳೆಯುತ್ತವೆ?

ಇಂತಹ ಕೆಲವು ಹೂಗಳನ್ನು ತಂದು ಕೋಷ್ಟಕದಲ್ಲಿ ಪರೀಕ್ಷೆಗೊಳಪಡಿಸಿರಿ.



# ಅಳತೆ

ಇಂದು ನಾವು ಶಾಲೆಯಲ್ಲಿ ಅಳತೆ ಮಾಡೋಣ. ಅಳೆಯುವುದನ್ನು ಆರಂಭಿಸುವ ಮೊದಲು ವರಾಂಡದ ಉದ್ದಳತೆಯನ್ನು ಅಂದಾಜು ಮಾಡಿರಿ. ನೀವು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ನಡೆಯುತ್ತಾ ಹೋದರೆ ಎಷ್ಟು ಹೆಜ್ಜೆಗಳಾಗುತ್ತದೆ? ಈಗ ವರಾಂಡದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ನಡೆಯುತ್ತಾ ಹೋಗಿರಿ. ಎಷ್ಟು ಹೆಜ್ಜೆಗಳಾದವು?

ಟೇಬಲ್, ಹಲಗೆ, ಕುರ್ಚಿಯಂತಹ ವಸ್ತುಗಳನ್ನು ಹೆಜ್ಜೆಗಳಿಂದ ಅಳತೆ ಮಾಡಲು ಆಗುವುದಿಲ್ಲ. ಇವುಗಳನ್ನು ಯಾವುದರಿಂದ ಅಳತೆ ಮಾಡಬೇಕು? ಬೇರಾವುದಾದರೂ ವಸ್ತುವಿನಿಂದ ಅಳತೆ ಮಾಡಲು ಸಾಧ್ಯವೇ?

ಮೊದಲು ಎಲ್ಲಕ್ಕಿಂತ ದೊಡ್ಡದು, ಹೀಗೆ ಕ್ರಮದಲ್ಲಿ ಬರೆಯಿರಿ.

ಆಟದ ಬಯಲು, ವರಾಂಡ, ........

ಟೇಬಲ್ಲು....... ಗೇಣು ..... ಬೆರಳು ಉದ್ದವಿದೆ

ಹಲಗೆ ....... ಗೇಣು ...... ಬೆರಳು ಉದ್ದವಿದೆ

ವರಾಂಡ ...... ಹೆಜ್ಜೆ ಅಗಲವಿದೆ

ಆಟದ ಬಯಲು .......ಕೋಲು ಉದ್ದವಿದೆ.


ಇಂತಹ ಮತ್ತಷ್ಟು ವಾಕ್ಯಗಳನ್ನು ಮಾಡಿರಿ ಹಾಗೂ ಮತ್ತಷ್ಟು ವಸ್ತುಗಳನ್ನು ತೆಗೆದುಕೊಳ್ಳಿರಿ.


ಆಟದ ಬಯಲು ವರಾಂಡಕ್ಕಿಂತ ಉದ್ದವಿದೆ. ವರಾಂಡ ವರ್ಗದ ಕೋಣೆಗಿಂತ ಉದ್ದವಿದೆ. ಸ್ಲೇಟು ಕಪ್ಪು ಹಲಗೆಗಿಂತ ಚಿಕ್ಕದು. ಸ್ಲೇಟು ಬೆಂಕಿಪೆಟ್ಟಿಗೆಗಿಂತ ಉದ್ದವಿದೆ.


- ಶಾಲೆಯಲ್ಲಿರುವ ಇತರ ವಸ್ತುಗಳನ್ನು ಅಳತೆ ಮಾಡಿರಿ.
- ಮನೆಯಲ್ಲಿ ಅಥವಾ ಆಟ ಆಡುವಾಗ ಯಾವ ವಸ್ತುಗಳಿಂದ ಅಳತೆ ಮಾಡುವಿರಿ?


# ಜೋಡಿಯನ್ನು ಹುಡುಕಿರಿ

ಪ್ರತಿಯೊಂದು ಸಾಲಿನಲ್ಲಿ ಮೊದಲನೆಯ ಚಿತ್ರದಂತಹ ಇನ್ನೊಂದು ಚಿತ್ರವಿರುತ್ತದೆ. ಅದನ್ನು ಗುರುತಿಸಿ ಅದರಲ್ಲಿ ಹೆಸರು ಬರೆಯಿರಿ.












# ಚಂದ್ರ ತಾರೆ

ಚಂದಿರನೇತಕೆ ಓಡುತ ಬರುವೆ
ತಾರೆಯು ಏಕೆ ನೋಡುತ ಬರುವೆ
ಓಡುತ ಓಡುತ ಗಕ್ಕನೆ ನಿಂತರೆ
ಸಕ್ಕರೆ ನಗೆಯಾ ಬೀರುವಿರಾ?
ಪಕ್ಕನೆ ಮೊಗವಾ ತೋರುವಿರಾ?
ಮೋಡದ ಮರೆಯಲಿ ಇಣುಕುವಿರಾ?
ಇರುಳಿನ ಪಾಳಿಗೆ ಜತೆಯಾಗುವಿರಾ?
ಅನುದಿನ ನಮ್ಮಯ ನಂಟು
ಇದರಲ್ಲೇನಿದೆ ಬಿಡಿಸದ ಕಗ್ಗಂಟು





# ಬಾಯ್ದೆರೆ ಲೆಕ್ಕಗಳು

1. ರಮ್ಯಳ ಬಳಿ 5 ಮಾವಿನ ಹಣ್ಣುಗಳಿವೆ. ಬಾಬು ಆಕೆಗೆ ಮತ್ತೆ 2 ಮಾವಿನಹಣ್ಣನ್ನು ಕೊಟ್ಟನು. ರಮ್ಯಳ ಬಳಿ ಈಗ ಎಷ್ಟು ಮಾವಿನ ಹಣ್ಣುಗಳಾಗುವವು?




2. ರಾಮಣ್ಣನ ಬಳಿ 4 ಎತ್ತುಗಳಿವೆ. ವೀರಪ್ಪನಿಂದ ಆತನು ಮತ್ತೆ 5 ಎತ್ತುಗಳನ್ನು ಕೊಂಡನು. ಈಗ ಆನತ ಹತ್ತಿರ ಒಟ್ಟು ಎಷ್ಟು ಎತ್ತುಗಳಿವೆ?

3. ರಾಮನ ಬಳಿ 15 ಗೋಲಿಗಳಿವೆ. ಆತನಿಗೆ ಮತ್ತೆ 4 ಗೋಲಿಗಳು ದೊರೆತವು. ಈಗ ಆತನ ಬಳಿ ಒಟ್ಟು ಎಷ್ಟು ಗೋಲಿಗಳಾದವು?

4. ರಾಜುವಿನ ಬಳಿ 87 ಮೇಕೆಗಳಿವೆ. ಅವುಗಳಲ್ಲಿ 3 ಮೇಕೆಗಳನ್ನು ಮಾರಿದನು. ಹಾಗಾದರೆ ಉಳಿದ ಮೇಕೆಗಳೆಷ್ಟು?


5. ಕೋತಿ 17 ಬಾಳೆಹಣ್ಣುಗಳನ್ನು ತಂದಿತು. ಅದರಲ್ಲಿ 5 ಬಾಳೆಹಣ್ಣುಗಳನ್ನು ತಿಂದಿತು. ಈಗ ಅದರ ಬಳಿ ಉಳಿದ ಬಾಳೆಹಣ್ಣುಗಳೆಷ್ಟು?




6. ಲಕ್ಷ್ಮಿ ಒಂದು ರೂಪಾಯಿಗೆ 5ರಂತೆ ಮಿಠಾಯಿ ಕೊಂಡಳು. ಆಕೆಗೆ 6 ರೂಪಾಯಿಗಳಿಗೆ ಎಷ್ಟು ಮಿಠಾಯಿ ಸಿಗುತ್ತದೆ.

7. ತರಗತಿಯಲ್ಲಿ 15 ಮಕ್ಕಳಿದ್ದಾರೆ. ಅವರಲ್ಲಿ 7 ಜನ ಓದುತ್ತಿದ್ದಾರೆ. ಉಳಿದವರು ಚಿತ್ರ ಬಿಡಿಸುತ್ತಿದ್ದಾರೆ. ಹಾಗಾದರೆ ಚಿತ್ರ ಬಿಡಿಸುತ್ತಿರುವ ಮಕ್ಕಳ ಸಂಖ್ಯೆ ಎಷ್ಟು?

# ಕ್ರಮಬದ್ಧವಾಗಿ ಜೋಡಿಸಿ ಹೇಳಿರಿ





ಪಕ್ಕದಲ್ಲಿ ಕೊಟ್ಟ ವಾಕ್ಯಗಳನ್ನು ಕ್ರಮದಲ್ಲಿ ಬರೆದು ಕಥೆ ಕಟ್ಟಿರಿ.

.................................... ☐ ಲಕ್ಷ್ಮಿ ಸಿಟ್ಟಿನಿಂದ ಚಿಮ್ಮಟವನ್ನು ಎತ್ತಿಕೊಂಡಳು.

.................................... ☐ ರೊಟ್ಟಿಯನ್ನು ನೋಡಿ ಇಲಿ ಮತ್ತು ಕಪ್ಪೆ ಒಂದು ಉಪಾಯ ಹೂಡಿದವು.

.................................... ☐ ಕಪ್ಪೆ, ಲಕ್ಷ್ಮಿ ಬಳಿ ಹೋಗಿ ಒಂದು ರೊಟ್ಟಿಯನ್ನು ಕೇಳಿತು.

.................................... ☐ ಕಪ್ಪೆ ಜಿಗಿದು ಪಾರಾಯಿತು. ಇಲಿ ರೊಟ್ಟಿಯನ್ನು ತೆಗೆದುಕೊಂಡು ಓಡಿ ಹೋಯಿತು.

.................................... ☐ ಲಕ್ಷ್ಮಿ ರೊಟ್ಟಿ ಮಾಡುತ್ತಿದ್ದಳು.

# ಯಾವ ವಸ್ತು ಎಲ್ಲಿ?

ಶಾಲಿನಿಗೆ ಬಹಳ ವಸ್ತುಗಳ ಹೆಸರು ಗೊತ್ತು. ಆಕೆ ಹೆಸರು ಬರೆದು, ಬರೆದು ಸ್ಲೇಟನ್ನೇ ತುಂಬಿಸಿದ್ದಳು. ಆ ಹೆಸರುಗಳನ್ನು ನಾನು ಕೆಳಗೆ ಬರೆದಿದ್ದೇನೆ. ಈಗ ಯಾವ ಅಂಕಣದಲ್ಲಿ ಯಾವ ಹೆಸರುಗಳನ್ನು ಬರೆಯಬೇಕೆಂಬುದರ ಬಗ್ಗೆ ಶಾಲಿನಿ ಯೋಚಿಸುತ್ತಿದ್ದಾಳೆ. ನೀವು ಅವಳಿಗೆ ಸಹಾಯ ಮಾಡಬಲ್ಲಿರಾ? ನೀವು ಸ್ವತಃ ಯೋಚಿಸಿ ಸರಿಯಾದ ಹೆಸರು ಬರೆಯಿರಿ.

| ಅಕ್ಷರ | ಪ್ರಾಣಿ ಅಥವಾ ಪಕ್ಷಿ | ಗಿಡ ಮರ | ತಿನ್ನುವ ವಸ್ತುಗಳು | ಆಟದ ಹೆಸರು ಮತ್ತು ಆಟದ ವಸ್ತುಗಳು |
|---|---|---|---|---|
| ಕ | ಕಡವೆ | ಕಣಗಲೆ | ಕರಗಂಟು | ಕಬಡಿ |
| ನ | ನವಿಲು | | | ಬುಗುರಿ |
| ಬ | | | | |
| ರ | | | | |
| ಸ | | | | |
| ಜ | | ಜಾಲಿ | | |
| ತ | | | | |

ನಾಯಿ, ಬೆಕ್ಕು, ಹೂವು ಗಿಡ, ಮಾವಿನ ಮರ, ಆನೆ, ಗಿಳಿ, ಬೆಲ್ಲ, ಬಾಳೆಹಣ್ಣು, ದ್ರಾಕ್ಷಿ, ರೊಟ್ಟಿ, ಚಿನ್ನಿದಾಂಡು, ಗೋಲಿ, ಕಲ್ಲು, ಚಾಕಲೇಟ್, ಪರಂಗಿ ಗಿಡ, ಆಲದ ಮರ, ಹಸು, ಕಬ್ಬು,ಕೋತಿ, ಕವಡೆ, ಹುಣಸೇಬೀಜ, ಕಬ್ಬಡ್ಡಿ, ಮರಕೋತಿ ಆಟ, ಬೇಲಿಗಿಡ.

ಇದೇ ರೀತಿಯ ಆಟವನ್ನು ನೀವು ಬೇರೆ ಅಕ್ಷರಗಳ ಜೊತೆಯೂ ಆಡಬಹುದು. ಬೇರೆ ತೆರನಾದ ಚೌಕಗಳನ್ನು ಸಹ ಮಾಡಬಹುದು.


ಉದಾ: ಟ ಅಕ್ಷರದಿಂದ ಆರಂಭವಾಗುವ ದುಂಡಾದ ಮತ್ತು ಕೆಂಪಾದ ಬಣ್ಣದ ವಸ್ತು ಕೇಳಿ. ಕಪ್ಪು ಹಲಗೆಯಲ್ಲಿ ಬರೆಯಿರಿ.

# ಇವನ್ನು ಬಿಡಿಸೋಣ ಬನ್ನಿ

| | | | |
|---|---|---|---|
| 6<br>-2<br>_____ | 23<br>+12<br>_____ | 3<br>x2<br>_____ | 8<br>-3<br>_____ |
| 15<br>+12<br>_____ | 22<br>-11<br>_____ | 9<br>-3<br>_____ | 4<br>+5<br>_____ |
| 14<br>+11<br>_____ | 5<br>+2<br>_____ | 5<br>+5<br>_____ | 3<br>x5<br>_____ |
| 6<br>+3<br>_____ | 5<br>-3<br>_____ | 7<br>-6<br>_____ | 9<br>-6<br>_____ |
| 8<br>+2<br>_____ | 4<br>-2<br>_____ | 4<br>x2<br>_____ | 4<br>x5<br>_____ |
| 25<br>-13<br>_____ | 2<br>x10<br>_____ | | |

- ಇಂತಹ ಮತ್ತಷ್ಟು ಲೆಕ್ಕಗಳನ್ನು ಸ್ಲೇಟಿನ ಮೇಲೆ ನೋಟು ಪುಸ್ತಕದಲ್ಲಿ ಮತ್ತು ಮರಳಿನಲ್ಲಿ ಬರೆದು ಮಾಡಿರಿ.
- ನಿಮ್ಮ ಸ್ನೇಹಿತನಿಗಾಗಿ ಮತ್ತಷ್ಟು ಪ್ರಶ್ನೆಗಳನ್ನು ರಚಿಸಿರಿ ಆತನ ಪ್ರಶ್ನೆಗಳಿಗೆ ಉತ್ತರಿಸಿರಿ.

# ಜೋಕಾಲಿ ಮಾಮ



ಒಂದು ಸಲ ಒಂದೂರಿಗೆ ಒಬ್ಬ ಜೋಕಾಲಿ ಮಾಮ ಬಂದ. ಆ ಜೋಕಾಲಿಯಲ್ಲಿ ಎಂಟು ತೊಟ್ಟಿಲುಗಳಿದ್ದವು. ಜೋಕಾಲಿ ಚಲಿಸುವಾಗ ತೊಟ್ಟಿಲುಗಳು ವೃತ್ತಾಕಾರದಲ್ಲಿ ಸುತ್ತುತ್ತಿದ್ದವು.

ನೋಡ ನೋಡುತ್ತಿದ್ದಂತೆಯೇ ಅಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಮಕ್ಕಳು ಒಂದುಗೂಡಿದರು. ಎಲ್ಲರೂ ಜೋಕಾಲಿಯಲ್ಲಿ ಜೀಕ ಬೇಕೆನ್ನುವವರೆ. ಆಗ ಜೋಕಾಲಿ ಮಾಮ ಅವರೆಲ್ಲರನ್ನು ಒಂದು ಸಾಲಿನಲ್ಲಿ ನಿಲ್ಲಿಸಿದ. ಮಕ್ಕಳು ಸರದಿಯಂತೆ ಜೋಕಾಲಿಯಲ್ಲಿ ಕುಳಿತುಕೊಳ್ಳಲಾರಂಭಿಸಿದರು.

ಒಂದು ತೊಟ್ಟಿಲಲ್ಲಿ ಐದು ಮಕ್ಕಳು ಕುಳಿತುಕೊಳ್ಳಲು ಸಾಧ್ಯವಿತ್ತು. ಈ ರೀತಿ ಎಲ್ಲ ತೊಟ್ಟಿಲುಗಳು ತುಂಬಿದ ಬಳಿಕ ಜೋಕಾಲಿ ಮಾಮ ಇತರ ಮಕ್ಕಳನ್ನು ತಡೆದ. ಮೊದಲಿನ ಸರದಿಯ ಹುಡುಗರು ತೂಗಿಕೊಂಡು ಇಳಿದ ನಂತರ ಸಾಲಿನಲ್ಲಿ ಉಳಿದವರನ್ನು ಹತ್ತಲು ಬಿಟ್ಟ.

ಆದರೆ ಇದೇನು? ಮಕ್ಕಳಿಗೆ ಜೋಕಾಲಿ ಜೀಕಿ ಇನ್ನೂ ಸಾಕಾಗಿರಲಿಲ್ಲ. ಆದ್ದರಿಂದ ಅವರು ಮತ್ತೆ ಸರದಿಯಲ್ಲಿ ನಿಲ್ಲತೊಡಗಿದರು. ಸರಿ ಜೋಕಾಲಿ ಮಾಮ ಜೋಕಾಲಿಯನ್ನು ತೂಗುತ್ತಲೇ ಇದ್ದ. ಮಕ್ಕಳು ತೂಗಿಸಿಕೊಳ್ಳುತ್ತಲೇ ಇದ್ದರು. ಈಗಲೂ ಕೂಡಾ ಯಾರಾದರೂ ಆ ಊರಿಗೆ ಹೋದರೆ ಜೋಕಾಲಿ ತೂಗುತ್ತಿರುವಂತೆ ಕಾಣುತ್ತದೆ.


**ಪ್ರಶ್ನೆಗಳು**

1. ಜೋಕಾಲಿಯಲ್ಲಿ ಒಂದು ಸಲಕ್ಕೆ ಎಷ್ಟು ಮಕ್ಕಳು ತೂಗಿಸಿಕೊಳ್ಳಲು ಸಾಧ್ಯ?
2. 8x5, 8x3, 8x2, 8x4
3. 4 ತೊಟ್ಟಿಲುಗಳು ತುಂಬಿದಾಗ ಜೋಕಾಲಿಯಲ್ಲಿ ಎಷ್ಟು ಮಕ್ಕಳಿದ್ದರು?
4. ಜೋಕಾಲಿಯಲ್ಲಿ ಒಟ್ಟು ಎಷ್ಟು ತೊಟ್ಟಿಲುಗಳಿವೆ?

# ಸುಂದರ ಸಂಜೆ

ಸಂಜೆಯ ಸಮಯ. ಹಳ್ಳಿಯಲ್ಲಿ ನಿಧಾನವಾಗಿ ಗದ್ದಲ ಹೆಚ್ಚುತ್ತಿತ್ತು. ಬೆಳಗ್ಗೆ ಕೆಲಸಕ್ಕೆ ಹೋದ ಜನ ಸಾಯಂಕಾಲ ಮನೆಗೆ ಮರಳುತ್ತಿದ್ದಾರೆ.

ಬಸವ ಹಗ್ಗದೊಂದಿಗೆ ಹಿಂತಿರುಗುತ್ತಿದ್ದ. ಮುನಿಯಾ ಮತ್ತು ಆಕೆಯ ಪತಿ ಹೊಲದಿಂದ ಬರುತ್ತಿದ್ದಾರೆ. ಬಾಬು ಸೈಕಲ್ ಮೇಲೆ ಬರುತ್ತಿದ್ದ. ಬಾಲು ತನ್ನ ನಾವೆಯನ್ನು ಮರಳಿ ತರುತ್ತಿದ್ದ. ಭಾರತಿ ಮತ್ತು ಭಾಗ್ಯ ಆ ಕಡೆ ಅಡವಿಯಿಂದ ನಡೆದು ಬರುತ್ತಿದ್ದಾರೆ. ರಸ್ತೆಯ ಮೇಲೆ ಭಾಷಾ ಚಿಕ್ಕಪ್ಪ ತನ್ನ ಎತ್ತಿನ ಬಂಡಿಯಲ್ಲಿ ಬರುತ್ತಿದ್ದಾನೆ. ಆತ ಇಂದು ಪೇಟೆಯಲ್ಲಿ ಮಡಕೆಗಳನ್ನು ಮಾರಿದ್ದಾನೆ.



ಸುಜಾತಳಂತೂ ಈಗಲೇ ಅಡುಗೆ ಆರಂಭಿಸಿಬಿಟ್ಟಿದ್ದಾಳೆ. ಆದರೆ ಲಕ್ಷ್ಮಿ ಮತ್ತು ಸವಿತ ಈವರೆಗೂ ನೀರು ತರುತ್ತಿದ್ದಾರೆ. ಚೆನ್ನ, ಚೆನ್ನಿ ನದಿಗೆ ಹೋಗಿದ್ದಾರೆ. ಸರಸಾಳ ತಾಯಿ ಮತ್ತು ಆಕೆಯ ಗೆಳತಿಯರು, ಮನೆಯ ಹೊರಗೆ ಕುಳಿತುಕೊಂಡು ಹರಟೆ ಹೊಡೆಯುತ್ತಿದ್ದಾರೆ. ಸರಸಳಂತೂ ಇನ್ನೂ ಜೋಕಾಲಿ ಜೀಕುತ್ತಿದ್ದಾಳೆ. ಮತ್ತು ಒಬ್ಬ ಬಳೆಗಾರ ಬಳೆ ಮಾರಾಟ ಮಾಡುತ್ತಿರುವುದನ್ನು ನೋಡುತ್ತಿದ್ದಾಳೆ.

**ಚರ್ಚಿಸಿರಿ**


1. ಮೇಲಿನ ಚಿತ್ರದಲ್ಲಿರುವ ವಸ್ತುಗಳನ್ನು ಗುರುತಿಸಿರಿ.
2. ಕೆಳಗೆ ಕೊಟ್ಟ ಸ್ಥಳದಲ್ಲಿ ನಿಮ್ಮ ಊರಿನ ಓಣಿಯ ಚಿತ್ರ ಬಿಡಿಸಿರಿ.
3. ನಿಮ್ಮ ಊರು ಅಥವಾ ಬೀದಿಯಲ್ಲಿ ಸಾಯಂಕಾಲ ಏನೇನು ನಡೆಯುತ್ತದೆ ಮತ್ತು ನೋಡುವಿರಿ.
4. ಇಲ್ಲಿ ತೋರಿಸಲಾದ ವಸ್ತುಗಳನ್ನು ನೋಡಿರಿ. ಇವುಗಳಲ್ಲಿ ಯಾವ ಯಾವ ವಸ್ತುಗಳು ನಿಮ್ಮಲ್ಲಿಯೂ ಇವೆ? ಮತ್ತು ಯಾವ ಯಾವ ವಸ್ತುಗಳಿಲ್ಲವೋ ಅವುಗಳ ಸುತ್ತ ಗೆರೆ ಎಳೆಯಿರಿ.

# ಬಾಲಣ್ಣ ಬೆಲ್ಲ ತಿಂದ



ಒಂದು ಕೋತಿಯಿತ್ತು. ಅದರ ಹೆಸರು ಬಾಲಣ್ಣ. ಅದು ತುಂಬಾ ತುಂಟ. ಒಂದು ದಿನ ಅದು ಕ್ಷೌರಿಕ ರಾಜುವಿನ ಬಳಿ ಹೋಗಿ ಹೇಳಿತು "ರಾಜಣ್ಣ ರಾಜಣ್ಣ, ನನ್ನ ತಲೆಗೂದಲನ್ನು ಕತ್ತರಿಸು".

ಕ್ಷೌರಿಕನು ಅದರ ಕೂದಲನ್ನೇನೋ ಕತ್ತರಿಸಿದ. ಆದರೆ ಬಾಲಣ್ಣ ರಾಜಣ್ಣನ ಕತ್ತಿಯನ್ನು ಎತ್ತಿಕೊಂಡು ಓಡಿ ಹೋಯಿತು. "ಅರೆ ಕತ್ತಿಯನ್ನು ಎತ್ತಿಕೊಂಡು ಎಲ್ಲಿಗೆ ಹೋಗುವೆ?" ಎಂದು ಕ್ಷೌರಿಕ ರಾಜಣ್ಣ ಕೂಗಿದ.



ಮುಂದೆ ಹೋಗುವಾಗ ಬಾಲಣ್ಣನಿಗೆ ಒಬ್ಬ ಹುಲ್ಲು ಕುಯ್ಯುವವ ಕಂಡ. ಬಾಲಣ್ಣನ ಕತ್ತಿಯನ್ನು ಬಿಸಾಕಿ ಹುಲ್ಲನ್ನೆತ್ತಿಕೊಂಡು ಓಡಿತು. "ಇದೇನು ಬಾಲಣ್ಣ?" ಎಂದು ಹುಲ್ಲು ಕೊಯ್ಯುವವ ಕೂಗಿದ.

ಬಾಲಣ್ಣ ಹೇಳಿತು.

"ನನ್ನ ಕೂದಲು ಕ್ಷೌರಿಕ ರಾಜಣ್ಣನ ಬಳಿ

ಕ್ಷೌರಿಕ ರಾಜುವಿನ ಕತ್ತಿ ನಿನ್ನ ಬಳಿ,

ನಿನ್ನ ಹುಲ್ಲು ನನ್ನ ಬಳಿ"

ಓಡೋಡುತ್ತಾ ಹೋಗುವಾಗ ಬಾಲಣ್ಣನಿಗೆ ದಾರಿಯಲ್ಲಿ ಒಬ್ಬ ವ್ಯಾಪಾರಿ ಸಿಕ್ಕ. ಆತನ ಪತ್ತಿರ ಬೆಲ್ಲವಿತ್ತು. ಬಾಲಣ್ಣ ಹುಲ್ಲಿನ ಹೊರೆಯನ್ನು ಕೆಳಗೆ ಒಗೆದು ಬೆಲ್ಲ ತೆಗೆದುಕೊಂಡು ಓಡಿ ಹೋಗಲು ಸಿದ್ಧವಾಗಿ ನಿಂತಿತು.

"ಬಾಲಣ್ಣ, ಬಾಲಣ್ಣ" ಎಂದು ವ್ಯಾಪಾರಿ ಕೂಗಿದ. ಬಾಲಣ್ಣ ಹೇಳಿತು
"ನನ್ನ ಕೂದಲು ಕ್ಷೌರಿಕ ರಾಜಣ್ಣನ ಬಳಿ
ಕ್ಷೌರಿಕನ ಕತ್ತಿ ಹುಲ್ಲು ಕೊಯ್ಯುವವನ ಬಳಿ
ಹುಲ್ಲು ಕೊಯ್ಯುವವನ ಹುಲ್ಲು ನಿನ್ನ ಬಳಿ
ನಿನ್ನ ಬೆಲ್ಲ ನನ್ನ ಬಳಿ"
ಹೀಗೆ ಹೇಳಿ ಬಾಲಣ್ಣ ಬೆಲ್ಲ ತಿನ್ನಲಾರಂಭಿಸಿತು.



**ಕೆಳಗಿನವುಗಳಲ್ಲಿ ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿರಿ.**

1. ಬಾಲಣ್ಣ ....... ಇದ್ದಿತು.

(ಬೇಸರ, ಖುಷಿಯಾಗಿ, ತುಂಟ, ಚತುರ, ಶೂರ, ಮೂರ್ಖ, ಅಂಜುಕುಳಿ)

2. ಸರಿಯಾದ ಜೊತೆ ಮಾಡಿರಿ.

ಕ್ಷೌರಿಕ, ಹುಲ್ಲು ಕೊಯ್ಯುವವ, ವ್ಯಾಪಾರಿ, ರೈತ, ಕುಡುಗೋಲು, ತಕ್ಕಡಿ, ಕತ್ತಿ, ನೇಗಿಲು.

- ಬಾಲಣ್ಣನ ಕೂದಲು

ಕ್ಷೌರಿಕನ ಕತ್ತಿ
ಹುಲ್ಲು ಕೊಯ್ಯುವವನ ಹುಲ್ಲು
ವ್ಯಾಪಾರಿಯ ಬೆಲ್ಲ

- ಹುಲ್ಲು ಕೊಟ್ಟಿತು

ಕತ್ತಿ ಕೊಟ್ಟಿತು
.................
..................

- ಶಕ್ತಿಯನ್ನು ತೆಗೆದುಕೊಂಡಿತು

................ ತೆಗೆದುಕೊಂಡಿತು.
..........................................
..........................................

- ಬಾಲಣ್ಣ ಹುಲ್ಲು ಕೊಯ್ಯುವವನಿಗೆ ಏನು ಕೊಟ್ಟಿತು?
- ಬಾಲಣ್ಣ ವ್ಯಾಪಾರಿಯಿಂದ ಏನು ತೆಗೆದುಕೊಂಡಿತು?
- ಎಲ್ಲರಿಗೂ ಈ ಕಥೆ ಹೇಳಿರಿ.
- ಇಂತಹ ಮತ್ತಷ್ಟು ಕಥೆಗಳನ್ನು ಕಟ್ಟಿ ಹೇಳಿರಿ.

# ಮತ್ತಷ್ಟು ಮೌಖಿಕ ಪ್ರಶ್ನೆಗಳು

1. ಒಂದು ಜೇನ್ನೊಣವು 4 ಸೇವಂತಿಗೆ ಮತ್ತು 5 ಗುಲಾಬಿ ಹೂಗಳಿಂದ ಮಧು ಹೀರಿಕೊಂಡು ತನ್ನ ಗೂಡಿನ ಕಡೆಗೆ ಹಾರಿಹೋಯಿತು. ಅದು ಒಟ್ಟು ಎಷ್ಟು ಹೂಗಳಿಂದ ಮಧುವನ್ನು ತೆಗೆದುಕೊಂಡಿತು?

2. 10 ಮಕ್ಕಳು ಮಣ್ಣಿನ ಆಟಿಕೆಗಳನ್ನು ಮಾಡುತ್ತಿದ್ದರು. ಪ್ರತಿಯೊಬ್ಬರೂ 1 ಆನೆ ಮತ್ತು 1 ಇಲಿಯನ್ನು ಮಾಡಿದರು. ಹಾಗಾದರೆ ಅವರೆಲ್ಲಾ ಸೇರಿ ಎಷ್ಟು ಪ್ರಾಣಿಗಳನ್ನು ಮಾಡಿದಂತಾಯಿತು?

3. ರಾಘು ಗ್ರಂಥಾಲಯದ ಪುಸ್ತಕವನ್ನೋದುತ್ತಿದ್ದ. ಆತ ಇಲ್ಲಿಯವರೆಗೆ 12 ಪುಟಗಳನ್ನು ಓದಿದ್ದ. ಪುಸ್ತಕದಲ್ಲಿ 25 ಪುಟಗಳಿವೆ. ಹಾಗಾದರೆ ರಾಘು ಇನ್ನೆಷ್ಟು ಪುಟಗಳನನ್ನು ಓದಬೇಕು?

4. ರಾಹುಲನ ಬಳಿ 6 ಗೋಲಿಗಳಿವೆ. ರಾಜೂನ ಬಳಿ ಅದರ ಎರಡು ಪಟ್ಟು ಗೋಲಿಗಳಿವೆ. ಹಾಗಾದರೆ ಇಬ್ಬರಲ್ಲೂ ಸೇರಿ ಒಟ್ಟು ಎಷ್ಟು ಗೋಲಿಗಳು ಇದ್ದಂತಾಯಿತು?

5. ರಮಾಳ ಬಲಿ 20 ನಾಣ್ಯಗಳಿವೆ. ಅದರ ಅರ್ಧದಷ್ಟು ನಾಣ್ಯಗಳು ರೇಣುಕಾಳ ಬಳಿ ಇವೆ. ಹಾಗಾದರೆ ರೇಣುಕಾಳ ಬಳಿ ಇದ್ದ ನಾಣ್ಯಗಳೆಷ್ಟು?


6. ಶಾಲೆಗೆ ತಡವಾಗಿ ಬಂದ ಕಾರಣ, ಗುರೂಜಿ 4 ಮಕ್ಕಳಿಗೆ ಗದರಿಸಿದರು. ಗಲಾಟೆ ಮಾಡುತ್ತಿದ್ದ ಕಾರಣ ಮತ್ತೆ 4 ಮಕ್ಕಳಿಗೆ ಗದರಿಸಿದರು. ಹಾಗಾದರೆ ಗುರೂಜಿ ಎಷ್ಟು ಮಕ್ಕಳಿಗೆ ಗದರಿಸಿದಂತಾಯಿತು?

7. ಗುರುಗಳು ಬಣ್ಣದ ಪೆನ್ಸಿಲ್‌ಗಳ 5 ಡಬ್ಬಗಳನ್ನು ಶಾಲೆಗೆ ತಂದರು. ಪ್ರತಿ ಡಬ್ಬದಲ್ಲಿ 6 ಪೆನ್ಸಿಲ್‌ಗಳಿವೆ. ಹಾಗಾದರೆ ಗುರುಗಳ ಬಳಿ ಒಟ್ಟು ಎಷ್ಟು ಪೆನ್ಸಿಲ್‌ಗಳಿವೆ?


- ಇಂತಹ ಮತ್ತಷ್ಟು ಲೆಕ್ಕ ಮಾಡಿರಿ. ನಿಮ್ಮ ಸ್ನೇಹಿತರಿಗಾಗಿ ಲೆಕ್ಕಗಳನ್ನು ರಚಿಸಿರಿ.

ಗಿಡುಗನನ್ನು ಅಡವಿಯ ರಾಜನೆಂದು
ಭಾವಿಸಲಾಗುತ್ತದೆ. ಯಾಕೆಂದರೆ ಅದು
ಎಲ್ಲಕಿಂತ ಹೆಚ್ಚು ದೂರ ನೋಡಬಲ್ಲದು






ಹುಂಜವು ಯಾವುದೇ ಪ್ರಾಣಿ ಅಥವಾ
ಪಕ್ಷಿಯ ಧ್ವನಿಯನ್ನು ಹೊರಡಿಸಬಲ್ಲದು



ನವಿಲು ತನ್ನನ್ನು ತಾನೆ
ಸಿಂಗರಿಸಿಕೊಳ್ಳುತ್ತಿರುತ್ತದೆ



ಗಪಡಮ್ ಗಬರಾಯ ಸಿಂಹ!
ಅದರ ಹೆಸರು ತೆಗೆದುಕೊಳ್ಳುತ್ತಲೇ
ಎಲ್ಲರೂ ನಗತೊಡಗುತ್ತಾರೆ
ಹೋ! ಹೋ! ಹೋ!

